QUESTION FOR ANSWER ON THE DAY

(but not taken up).

Amount spent for maintaining law and order during the recent Students' Strike in old Mysore area.

* *Q.*—118. Sri S. M. KRISHNA (Maddur).—

Will the Government be pleased to state :—

(*a*) the amount spent for maintaining law and order during the recent students' strike in old Mysore area ;

(*b*) the number of policemen that were deployed on special duty to various Districts in this connection ?

A.—Sri R. M. PATIL (Minister for Home).—

(*a*) Rs. 480-79 nP.

(*b*) 254.

Mr. SPEAKER.—Before I call upon the Hon'ble Minister to start the reply, I want to say that an Hon'ble Member namely Sri B. L. Gowda has made a request that he may be given a chance to speak. That is a solitary request. I have proposed to give him 10 minutes.

MOTION OF THANKS TO THE GOVERNOR FOR HIS ADDRESS.

(*Debate continued*)

ಶ್ರೀ ಬಿ. ಎಲ್. ಗೌಡ.—ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ಶ್ರೀಮಾನ್ ಸಿದ್ದಯ್ಯನವರು ತಂದಿರತಕ್ಕಂಥ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಾ, ಸರಕಾರದವರು ಯಾವ ರೀತಿಯಲ್ಲಿ ತಾವು ರೂಪಿಸಿದಂಥ ನೀತಿಗಳನ್ನು ಅನುಸರಿಸದೆ ಗಾಳಿಗೆ ಬಿಟ್ಟಿದ್ದಾರೆ, ತಾವು ಹಾಕಿದಂಥ ಕೆಲವು ನೀತಿಗಳಿಗೆ ವಿರೋಧವಾಗಿ ಹೇಗೆ ನಡೆದುಕೊಂಡಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

1-30 P.M.

ನಾನು ಕೇವಲ ಸಹಕಾರ ಮತ್ತು ವ್ಯವಸಾಯ ಇಲಾಖೆಗಳ ಬಗ್ಗೆ ಮಾತ್ರ ನನ್ನ ಭಾಷಣವನ್ನು ಮಿತಿಗೊಳಿಸುತ್ತೇನೆ. ಸಹಕಾರ ಇಲಾಖೆ ಬಹಳ ಮಹತ್ವದ ಇಲಾಖೆ. ಅಂತಹ ಒಂದು ಇಲಾಖೆಯಲ್ಲಿ ಅಲ್ಲಿನ ನಿಯಮಗಳ ಉಲ್ಲಂಘನೆಯಿಂದ ಎಷ್ಟೋ ಜನರಿಗೆ ತೊಂದರೆಯಾಗುತ್ತದೆ. ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹೋದ ಸಾರಿ ಈ ಶಾಸನ ಸಭೆಯಲ್ಲಿ ಮಾನ್ಯ ಮಂತ್ರಿಗಳು ಈ ಸಹಕಾರ ತತ್ವದಲ್ಲಿ ಆಂದೋಳನ ಮಾಡುತ್ತೇನೆ, ಸಹಕಾರಿ ತತ್ವವನ್ನು ಡೀಅಫೀಲಿಯಲೈವೇಷನ್ ಅಥವಾ ಸರಕಾರಿ ಕೈವಾಡ ಕಡಮೆ ಮಾಡುತ್ತೇವೆ ಎಲ್ಲಾ ಸಹಕಾರಿ ಸಂಘಗಳಲ್ಲೂ ಜಿಲ್ಲಾ ಮಟ್ಟದ ಕೆಳಗೆ ಇರತಕ್ಕ ಸಂಘಗಳಿಗೆ ಖಾಸಗಿಯವರನ್ನು ನಾಮಕರಣ ಮಾಡುವುದನ್ನು ಕೈಬಿಡುತ್ತೇವೆ ಎಂದು ಹೇಳಿದರು. ಆದರೆ ಕಾರ್ಯಾಚರಣೆಯಲ್ಲಿ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ತಮ್ಮ ಗಮನಕ್ಕೆ ಒಂದು ಉದಾಹರಣೆಯನ್ನು ತರುವುದಾದರೆ ತಾಲ್ಲೂಕು ಮಟ್ಟದ ವ್ಯವಸಾಯ ಉತ್ಪನ್ನದ ಮಾರಾಟ ಸಂಘಗಳಿಗೆ ಜಿಲ್ಲಾ ಕೇಂದ್ರ ಬ್ಯಾಂಕುಗಳಿಗೆ – ಅವರ ತತ್ವಕ್ಕೆ ವಿರುದ್ಧವಾಗಿ ಇನ್ನೂ ಖಾಸಗಿಯವರನ್ನೇ ನಾಮಕರಣ ಮಾಡಿ ಮುಂದುವರಿಸಿಕೊಂಡು ಬರುತ್ತಾ ಇದ್ದಾರೆ. ಇದನ್ನು

ಹೇಗೆ ಮಾಡುತ್ತಾ ಇದ್ದಾರೆ ಎಂದರೆ ಯಾರು ಅವರ ಪಕ್ಷಕ್ಕೆ ಸೇರಿದ್ದಾರೆಯೋ, ಯಾರು ಸಹಕಾರ ಸಂಘಗಳಲ್ಲಿ ಸಹಕಾರ ತತ್ವಕ್ಕೆ ವಿರುದ್ಧವಾಗಿ ನಡೆದುಕೊಂಡು ಬಂದಿದ್ದಾರೆಯೋ ಅಂತಹವರನ್ನೇ ತೆಗೆದುಕೊಂಡಿದ್ದಾರೆ, ನಾಮಕರಣ ಮಾಡಿದ್ದಾರೆ. ಅದರಿಂದ ನಿಜವಾಗಿಯೂ ಸಹಕಾರ ತತ್ವ ಕುಂಠಿತವಾಗುತ್ತದೆಯೇ ಹೊರತು ಪ್ರಗತಿ ಹೊಂದುವುದಿಲ್ಲ. ಈ ನೀತಿಯನ್ನು ಅನುಸರಿಸುವುದು ನಿಜವಾಗಿಯೂ ಲಾಯುಕ್ಕಲ್ಲ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಅದೂ ಅಲ್ಲದೆ ಸಹಕಾರ ಇಲಾಖೆಯಲ್ಲಿ ಇನ್ನೂ ಒಂದು ಪಕ್ಷಪಾತ ನಡೆಯುತ್ತಾ ಇದೆ, ಕೆಲವರಿಗೆ ಸಹಕಾರ ಸಂಘಗಳಿಗೆ ಶೇರ್ ಕ್ಯಾಪಿಟಲ್ ಕೊಡುತ್ತಾರೆ ಸರಕಾರದಿಂದ ಸಹಾಯ ಧನ ಕೊಡುತ್ತಾರೆ, ಇನ್ನು ಕೆಲವರಿಗೆ ಅದು ಯಾವುದನ್ನೂ ಕೊಡುವುದಿಲ್ಲ. ಈ ರೀತಿ ಎಲ್ಲಾ ವಿಧದಲ್ಲೂ ಸರಕಾರ ಒಂದು ತಾರತಮ್ಯ ದೃಷ್ಟಿಯಿಂದ ನೋಡುತ್ತಾ ಇದೆ. ಎಲ್ಲಿ ಆಡಳಿತ ಪಕ್ಷದವರು ಸೇರಿದ್ದಾರೆಯೋ ಅಂತಹ ಬ್ಯಾಂಕುಗಳಿಗೆ ಅಂತಹ ಸಹಕಾರ ಸಂಘಗಳಿಗೆ ಬೇಕಾದಷ್ಟು ಷೇರ್ ಕ್ಯಾಪಿಟಲ್ ಕೊಟ್ಟಿದ್ದಾರೆ ಮತ್ತು ಎಲ್ಲಿ ವಿರೋಧ ಪಕ್ಷದವರು ಇದ್ದಾರೋ, ವಿರೋಧ ಪಕ್ಷದವರ ಕೈಯಲ್ಲಿ ಅಧಿಕಾರ ಇದೆಯೋ ಅಂತಹ ಸಹಕಾರ ಸಂಘಗಳಿಗೆ ಸರಕಾರದ ಸಹಾಯ ಧನವನ್ನು ಕೊಡುವುದಕ್ಕೆ ತಿರಸ್ಕಾರ ಮಾಡಿದ್ದಾರೆ. ಇದು ಬಹಳ ವಿಷಾದಕರವಾದ ನೀತಿ. ಸರಕಾರದವರು ಸಹಕಾರ ಸಂಘಗಳ ಆಡಳಿತದಲ್ಲಿ ಕೈಹಾಕುತ್ತ ಇರುವುದನ್ನು ತಪ್ಪಿಸದಿದ್ದರೆ ಖಂಡಿತವಾಗಿಯೂ ನಮ್ಮ ದೇಶದ ಕಲ್ಯಾಣವಾಗುವುದಿಲ್ಲ ನಮ್ಮ ದೇಶಕ್ಕೆ ಒಳ್ಳೆಯದು ಆಗುವುದಿಲ್ಲ ಎಂಬುದನ್ನು ಬಹಳ ವಿಷಾದದಿಂದ ತಮ್ಮ ಗಮನಕ್ಕೆ ತರಬೇಕಾಗಿದೆ. ಇದೇ ರೀತಿಯಲ್ಲಿ ಗೋಡೌನ್ ಎಂದು ಮಾಡಿರುತ್ತಾರೆ ರೈತರು ತಂದ ಫಸಲು ಮಾರಾಟ ಮಾಡಲು ಗೋಡೌನ್‌ಗಳನ್ನು ಮಾಡಿರುತ್ತಾರೆ, ಇಲ್ಲೂ ವಿರೋಧ ಪಕ್ಷದವರು ಇರುವ ಕಡೆ ಷೇರ್ ಕ್ಯಾಪಿಟಲ್ ಇದ್ದರೂ ಗೋಡೌನ್‌ಗಳಿಗೆ ಅವಕಾಶ ಮಾಡಿಕೊಟ್ಟಿಲ್ಲ. ಅದೇ ಅವರವರೇ ಇರುವ ಜಾಗದಲ್ಲಿ ಸೊಸೈಟಿ ಇರಲಿ ಇಲ್ಲದೇ ಇರಲಿ, ಸುಮ್ಮನೆ ಪುಸ್ತಕದಲ್ಲಿ ಇದ್ದರೂ ಕೆಲಸ ಮಾಡುತ್ತಿಲ್ಲ ಎಂದರೂ ಗೋಡೌನ್ ಕೊಟ್ಟಿದ್ದಾರೆ. ಇದರಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇಂತಹ ನೀತಿಯನ್ನು ಅನುಸರಿಸುವುದಕ್ಕಿಂತ ಈ ಸಹಕಾರ ಇಲಾಖೆಯನ್ನು ಏಕೆ ವಜಾ ಮಾಡಬಾರದು ಎಂದು ಕೇಳುತ್ತೇನೆ.

ರೆಗ್ಯೂಲೇಟೆಡ್ ಮಾರ್ಕೆಟಿಂಗ್ ಸೊಸೈಟಿಗಳು ಇವೆ. ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ, ಚಳ್ಳಕೆರೆ ಮುಂತಾದ ಕಡೆಗಳಲ್ಲಿ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳಿಗೆ ಚುನಾವಣೆ ನಡೆದು ಒಂದು ವರ್ಷಕ್ಕೆ ಮೇಲ್ಪಟ್ಟು ಆಯಿತು. ಆದರೂ ಈವರೆಗೂ ಅದಕ್ಕೆ ಅಧ್ಯಕ್ಷರ ಚುನಾವಣೆ ಆಗಿಲ್ಲ, ನಾಮಕರಣ ಆಗಿಲ್ಲ. ದಾವಣಗೆರೆಯಲ್ಲಿ ಒಬ್ಬರನ್ನು ನಾಮಕರಣ ಮಾಡಿದ್ದರು – ಅವರಿಗೆ ಬೇಕಾದವರನ್ನು – ಅದು ಉನ್ನತ ನ್ಯಾಯಾಲಯಕ್ಕೆ ಹೋಗಿ ಆ ರೀತಿ ಮಾಡಿದ್ದು ಕ್ರಮವಲ್ಲ, ಕಾನೂನು ಬಾಹಿರ ಎಂದು ಹೇಳಿ ತೀರ್ಮಾನವಾಯಿತು. ಇದುವರೆಗೂ ಅಲ್ಲಿಗೆ ಚುನಾವಣೆ ಮಾಡುವುದಕ್ಕೆ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದೇ ರೀತಿ ಚಿತ್ರದುರ್ಗ ಮತ್ತು ಚಳ್ಳಕೆರೆ ಮಾರ್ಕೆಟಿಂಗ್ ಸೊಸೈಟಿಗಳಲ್ಲೂ ಸಹ ಚುನಾವಣೆ ಆಗಿ 6 ತಿಂಗಳು ಆಯಿತು, ಅಧ್ಯಕ್ಷರ ಚುನಾವಣೆ ಆಗಬೇಕು, ನಾಮಕರಣ ಆಗಬೇಕು, ಇದುವರೆಗೂ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಸಹಕಾರ ತತ್ವ ಬಹಳ ಮುಖ್ಯವಾದುದು, ಎಲ್ಲವನ್ನೂ ಸಹಕಾರ ತತ್ವದಿಂದಲೇ ಸಾಧಿಸಬೇಕು ಎಂದು ಹೇಳತಕ್ಕ ಸರಕಾರ ಸಣ್ಣ ಒಂದು ಮಾರ್ಕೆಟಿಂಗ್ ಸೊಸೈಟಿ ಅಧ್ಯಕ್ಷರ ಚುನಾವಣೆ ಅಥವಾ ನಮಕರಣ ಮಾಡುವ ವಿಷಯದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ನಿಜವಾಗಿಯೂ ಈ ಮಂತ್ರಿಗಳಿಗೆ ಸರಕಾರವನ್ನು ನಡೆಸುವ ಶಕ್ತಿ ಸಾಮರ್ಥ್ಯ ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ನಿತ್ಯ ಆಡಳಿತದಲ್ಲೂ ಪಕ್ಷಪಾತ ಮಾಡುತ್ತಾ ಇದ್ದಾರೆ ಎಂದು ಹೇಳುತ್ತೇನೆ, ಯಾವ ರೀತಿ ಎಂದರೆ ಕೆಲವು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿ ಅವನ್ನು ಸೂಪರ್‌ಸೀಡ್ ಮಾಡಬೇಕೆಂದು ಶಿಫಾರಸು ಮಾಡಿರುತ್ತಾರೆ. ಅಂತಹ ಸಹಕಾರ ಸಂಘಗಳಲ್ಲಿ ಅವರ ಪಾರ್ಟಿಯವರು ಯಾರಾದರೂ ಅಧಿಕಾರದಲ್ಲಿದ್ದರೆ ಅಂತಹ ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡಬಾರದು ಎಂದು ಹೇಳಿ ಸ್ಟೇ ಆರ್ಡರ್ ಕೊಟ್ಟು ಎಲ್ಲಿ ನ್ಯೂನತೆ ಇದೆಯೋ ಎಲ್ಲಿ ಕೆಟ್ಟ ಕೆಲಸ ನಡೆದಿದೆಯೋ ಅಂತಹ ಜಾಗದಲ್ಲೂ ಕೂಡ ಆ ಸಹಕಾರ ಸಂಘಗಳು ಮುಂದುವರಿಯಬೇಕೆಂದು ಹೇಳಿರತಕ್ಕ ನಿದರ್ಶನಗಳು ಇವೆ. ಮಂತ್ರಿಗಳಿಗೆ ಬರೆದಿದ್ದೇನೆ, ಇವತ್ತಿನವರೆಗೂ ಅದರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಎಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಇಂತಹ ನ್ಯೂನತೆಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಸಹಕಾರ ಇಲಾಖೆ ಏಕೆ ಇರಬೇಕೆಂದು ಪ್ರಶ್ನೆ ಮಾಡುತ್ತೇನೆ.

ಇದೇ ರೀತಿಯಲ್ಲಿ ಪಂಚಾಯ್ತಿ ರಾಜ್ಯ. ಯಾವ ಪಂಚಾಯ್ತಿಯಲ್ಲೂ ಆಡಿಟ್ ನಡೆದಿಲ್ಲ. ಒಬ್ಬ ವಿಲೇಜ್ ಅಕೌಂಟೆಂಟನ್ನು ನೇಮಕ ಮಾಡಿದರೆ ಆತನಿಗೆ ಹತ್ತಾರು ತಿಂಗಳುಗಳಿಂದ ಸಂಬಳ ಬಂದಿಲ್ಲ. ಒಂದು ನೀತಿ ನಿಯಮ ನಿರೂಪಣೆ ಮಾಡಬೇಕಾದರೆ ಮುಂದಾಲೋಚನೆ ಇಲ್ಲದೆ ಏಕೆ ನಿರೂಪಣೆ ಮಾಡುತ್ತಾರೆಯೋ ಅರ್ಥವಾಗುವುದಿಲ್ಲ.

(ಶ್ರೀ ಬಿ. ಎಲ್. ಗೌಡ)

ಇದೇ ರೀತಿಯಲ್ಲಿ ಸಮಾಜ ಕಲ್ಯಾಣದ ಬಗ್ಗೆ ಹೇಳುವುದಾದರೆ ಹಿಂದುಳಿದಿರತಕ್ಕ ವರ್ಗದವರಿಗೆ ರಾಜ್ಯಾಂಗ ದತ್ತವಾಗಿ ರಕ್ಷಣೆ ಕೊಡಬೇಕೆಂದು ಹೇಳಿರುವಾಗಲೂ 17 ಜನ ಸೋಷಿಯಲ್ ವೆಲ್ ಫೇರ್ ಆಫೀಸರುಗಳನ್ನು ಮನೆಗೆ ಕಳುಹಿಸಿದ್ದಾರೆ. ಅವರು 6-7 ವರ್ಷ ಕೆಲಸ ಮಾಡಿದ್ದವರು ಅಂತ ಹವರನ್ನು ಯಾವ ಕಾರಣವೂ ಇಲ್ಲದೆ ಮನೆಗೆ ಕಳುಹಿಸುವುದಕ್ಕೆ ಬದಲಾಗಿ ಅವರನ್ನು ಅಧಿಕಾರದಲ್ಲೇ ಇಟ್ಟುಕೊಂಡು ಮುಂದುವರಿಸುವುದಕ್ಕೆ ಆಗುತ್ತಾ ಇರಲಿಲ್ಲವೇ ? ಇದೆಯೇ ಅವರು ಸಮಾಜದಲ್ಲಿ ಹಿಂದುಳಿದ ಪಂಗಡಗಳಿಗೆ ತೋರಿಸತಕ್ಕ ಔದಾರ್ಯ ಎಂದು ನಾನು ಕೇಳುತ್ತಾ ಇದ್ದೇನೆ. ಹಿಂದಿನ ಮಂತ್ರಿಮಂಡಲದವರು ಮಾಡಿದ್ದರು ; ಅದನ್ನು ತೆಗೆದುಹಾಕಬೇಕು ಎಂಬ ಒಂದು ಸೇಡನ್ನು ತೀರಿಸಿ ಕೊಳ್ಳುವ ದೃಷ್ಟಿಯಿಂದ 17 ಜನರನ್ನು ಮನೆಗೆ ಕಳುಹಿಸಿದ್ದು ಯಾವ ರೀತಿಯಿಂದಲೂ ಸರಿಯಲ್ಲ, ಅದನ್ನು ಸರಿಪಡಿಸುವ ಪ್ರಯತ್ನ ಸರ್ಕಾರದವರು ಮಾಡದೇ ಇದ್ದುದು ವಿಷಾದಕರ. ಹಿಂದುಳಿದ ಪಂಗಡಗಳವರು ಮನೆಗಳನ್ನು ಕಟ್ಟಿಕೊಳ್ಳಲು, ಎತ್ತು ಮುಂತಾದುವುಗಳನ್ನು ಕೊಂಡು ಕೊಳ್ಳಲು ಹಣ ಕೊಡುತ್ತಾ ಇದ್ದಾರೆ, ಇದುವರೆಗೂ ಅವರಿಗೆ ಒಂದು ಕಾಸೂ ಮುಟ್ಟಿಲ್ಲ. ಹರಿಜನರಿಗೆ ಕೋ ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳನ್ನು ಮಾಡಿದ್ದಾರೆ ಅವು ಚಿಂತಾಜನಕ ಸ್ಥಿತಿಯಲ್ಲಿ ಇವೆ. ನನ್ನ ತಾಲ್ಲೂಕಿನಲ್ಲಿ ಎರಡು ಮೂರು ಸೊಸೈಟಿಗಳು ಇವೆ. ಲಕ್ಷಾಂತರ ರೂಪಾಯಿಗಳನ್ನು ಅದರಲ್ಲಿ ಹಾಕಿದ್ದಾರೆ. ಚಾಳೂರು ಮತ್ತು ಸಾಣಿಕೆರೆ ಕಾವಲಿನಲ್ಲಿ ಲಕ್ಷ ರೂಪಾಯಿ ವಿನಿಯೋಗಿಸಿದ್ದಾರೆ, ಅದರಿಂದ ಪ್ರತಿಫಲ ಏನೂ ಬರುತ್ತಿಲ್ಲ ಆ ವಿಷಯವನ್ನು ಈ ಸಭೆಯಲ್ಲೇ ಎರಡು ಮೂರು ಸಾರಿ ಹೇಳಿದ್ದೇನೆ, ಇದುವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಆ ಬಗ್ಗೆ ತನಿಖೆ ಕೂಡ ನಡೆದಿಲ್ಲ. ಈ ರೀತಿ ಹಿಂದುಳಿದ ಪಂಗಡದವರಿಗೆ ಬಹಳ ಅನ್ಯಾಯವಾಗುತ್ತಾ ಇದೆ. ಸರ್ಕಾರದವರು ಹಿಂದುಳಿದ ಪಂಗಡಗಳಿಗೆ ರಾಜ್ಯಾಂಗದತ್ತವಾಗಿ ಕೊಟ್ಟಿರತಕ್ಕ ರಕ್ಷಣೆಗಳನ್ನು ನೆರವೇರಿಸುವುದರಲ್ಲಿ ವಿಮುಖರಾಗಿದ್ದಾರೆ ಎಂದು ಬಹಳ ವಿಷಾದದಿಂದ ತಮ್ಮ ಗಮನಕ್ಕೆ ತರಬೇಕಾಗಿದೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೃಷ್ಣಾ-ಗೋದಾವರಿ ನೀರಿನ ಉಪಯೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಮತ್ತು ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಆ ರೀತಿ ಹಳೇ ಮೈಸೂರಿನಲ್ಲಿ ಕಾವೇರಿ ನದೀ ನೀರಿನ ಉಪಯೋಗದ ಬಗ್ಗೆ ಅವರು ಹೆಚ್ಚಾಗಿ ಹೇಳಿಲ್ಲ. ಅವರ ಅಡ್ರೆಸ್‌ನಲ್ಲೇ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಇನ್ನೂ ಕೆಲವು ಜಿಲ್ಲೆಗಳಲ್ಲಿ ಬರಗಾಲ ಬಂದಿದೆ ಎಂಬುದನ್ನು ಹೇಳಿದ್ದಾರೆ. ವರ್ಷೇ ವರ್ಷೇ ಇದರ ಹಂಗಾಮಿ ಪರಿಹಾರಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಖಾಯಂ ಪರಿಹಾರ ಕಾರ್ಯ ಮಾಡಲು ಯಗಚಿ ನದಿಯಿಂದ ವಾಣಿವಿಲಾಸ ಸಾಗರಕ್ಕೆ ನೀರನ್ನು ತಿರುಗಿಸಬೇಕೆಂದು ಬಹಳ ದಿವಸದಿಂದ ಒತ್ತಾಯ ಮಾಡುತ್ತಾ ಇದ್ದೇವೆ, ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಆದರ ಬಗ್ಗೆ ರಾಜ್ಯಪಾಲರು ಏನೂ ಪ್ರಸ್ತಾಪ ಮಾಡಿಲ್ಲ. ಇದು ಬಹಳ ವಿಷಾದದ ಸಂಗತಿ. ಹಂಗಾಮಿ ಪರಿಹಾರಕ್ಕೆ ವರ್ಷೇ ವರ್ಷೇ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಬದಲಾಗಿ ಖಾಯಂ ಪರಿಹಾರದ ಆ ಯೋಜನೆಯನ್ನು ಶೀಘ್ರವಾಗಿ ತೆಗೆದು ಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದೇ ರೀತಿ ಸುವರ್ಣಮುಖಿ ನದಿಯಿಂದ ಧರ್ಮ ಪುರಕ್ಕೆ ನೀರನ್ನು ತೆಗೆದುಕೊಳ್ಳುವ ಯೋಜನೆಯನ್ನು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಸರ್ಕಾರದವರು ಅನೇಕ ಸಾರಿ ಈ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಬಾವಿಗಳನ್ನು ತೆಗೆಸಿ, ಕೊಡುತ್ತೇವೆ ಎಂದೂ, ಕಾಂಟೂರ್ ಬಂಡಿಂಗ್ ಮಾಡುತ್ತೇವೆ ಎಂದೂ ಅಫಾರಸ್ಟೇಷನ್ ಮಾಡಿಸುತ್ತೇವೆಎಂದೂ ಹೇಳಿಅದಕ್ಕೆ ಅಂದಾಜುಗಳನ್ನೂ ತಯಾರುಮಾಡಿದ್ದರು. ಬರೀ ಅದು ಅಂದಾಜಾಗಿ ಉಳಿದಿದೆಯೇ ಹೊರತು ಇದುವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಹೀಗಾದರೆ ನಿಜವಾಗಿಯೂ ಪದೇಪದೆ ಬರಗಾಲಕ್ಕೆ ತುತ್ತಾಗುತ್ತಿರುವ ಈ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತದೆ, ಆದ್ದರಿಂದ ಕೂಡಲೇ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರಕಾರದವರನ್ನು ಅಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ಪ್ರಶ್ನೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ಅದು ಯಾವುದೆಂದರೆ ಪಾನ ನಿರೋಧ. ಆ ವಿಚಾರವನ್ನು ನನ್ನ ಮಿತ್ರರು ಹೇಳಿದ್ದಾರೆ. ಅದು ವಿಫಲವಾಗಿದೆಯೆಂದು ಕಂಡುಬಂದಿದ್ದರೂ ಆ ಬಗ್ಗೆ ಇನ್ನೂ ಒಂದು ತೀರ್ಮಾನ ತೆಗೆದುಕೊಂಡಿಲ್ಲ. ಅದೊಂದು ನೀತಿಯ ಪ್ರಶ್ನೆ. ರಾಜ್ಯಪಾಲರ ಭಾಷಣದಲ್ಲಿ ನೀತಿಯ ಪ್ರಶ್ನೆ ಸಹ ಪ್ರಸ್ತಾಪಿಸಲ್ಪಡದಿರುವುದು ವಿಷಾದಕರವೆಂದು ಹೇಳಿ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

Mr. SPEAKER.—Before I call upon the Hon'ble Minister to commence his reply, I wish to inforn the House that I have received a communication from the Hon'ble Chief Minister. This matter, namely, the Hon'ble Chief Minister's absence from the House and his illness was also mentioned yesterday in the House. The gist of the communication is like this: Doctors who examined the Hon'ble Chief Minister this morning have again advised him to have complete rest at least till Monday next. Therefore the Chief Minister writes:

"However much I like to participate in the legislative deliberations at least for a couple of hours daily, the medical advice is against it. I hope to be all right by the 9th. You will kindly excuse my absence".

Sri S. SIVAPPA (Sravanabelagola).—Sir, we wish him good health and quick recovery.

Mr. SPEAKER.—I hope this is the desire of every Member. I will convey it to the Hon'ble Chief Minister that it is the desire of every Member of the House that he should recover speedily and come back to the House. Now the Hon'ble Minister for education will reply to the Debate.

† ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಸನ್ಮಾನ್ಯ ಸಭಾಪತಿಗಳೇ, ಈಗಿನ ರಾಜ್ಯಪಾಲರ ಭಾಷಣದ ಮೇಲೆ ನಡೆದಂಥ ಚರ್ಚೆಯಲ್ಲಿ ಅನೇಕ ಸದಸ್ಯರು ಶಿಕ್ಷಣ ಖಾತೆಯ ಬಗ್ಗೆ ಶಿಕ್ಷಣದ ಬಗ್ಗೆ ಸೂಚನೆಗಳನ್ನು ಮಾಡಿದ್ದಾರೆ, ಸರ್ಕಾರದಿಂದ ಕ್ಲ್ಯಾರಿಫಿಕೇಷನ್ ಕೇಳಿದ್ದಾರೆ, ಹಾಗೂ ಸರ್ಕಾರದ ಮೇಲೆ ಒಬ್ಬಬ್ಬರು ಅಪಾದನೆಯನ್ನೂ ಮಾಡಿದ್ದಾರೆ. ಅದರಲ್ಲಿ ಸರ್ಕಾರದ ಮೇಲೆ ಹಾಗೂ ನನ್ನ ಮೇಲೆ ಮಾಡಿದ ಅಪಾದನೆಯ ವಿಚಾರವಾಗಿ ನಾನು ಏನನ್ನೂ ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ ಅಪಾದನೆ ಎಷ್ಟು ಮಟ್ಟಿಗೆ ಸತ್ಯ ಎಂದು ಸನ್ಮಾನ್ಯ ಸಭಾಪತಿಗಳೇ ಯೋಚನೆ ಮಾಡಬೇಕು

ಮೊದಲನೆಯದಾಗಿ ಮಾನ್ಯ ಸದಸ್ಯರು ಶಿಕ್ಷಣದಲ್ಲಿ ಏಕರೂಪತೆ ತರಲು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಹೇಳಬೇಕಾದರೆ ಹೈಸ್ಕೂಲು ಶಿಕ್ಷಣ ದೇಶದಾದ್ಯಂತ ಏಕರೂಪ ವಾಗಿರುವಂತೆ ಮಾಡಿದ್ದಾರೆ. 1959ರಲ್ಲೇ ಸರ್ಕಾರದವರು 7 ವರ್ಷ ಪ್ರಾಥಮಿಕ ಶಿಕ್ಷಣ ಹಾಗೂ 4 ವರ್ಷ ಸೆಕೆಂಡರಿ ಶಿಕ್ಷಣ ಅಂದರೆ ಹೈಯರ್ ಎಜುಕೇಷನ್ ಇರಬೇಕೆಂದು ಒಪ್ಪಿಕೊಂಡರು. ಆಮೇಲೆ ಅದನ್ನು 1960—61 ರಿಂದ ಕಾರ್ಯರೂಪಕ್ಕೆ ತರಲು ಪ್ರಾರಂಭಿಸಿದ್ದಾರೆ. ಆಗ 8 ನೆಯ ಕ್ಲಾಸ್ ಮಾಡಿ, 61—62ರಲ್ಲಿ 9ನೆಯ ಕ್ಲಾಸ್, 62—63ರಲ್ಲಿ 10ನೆಯ ಕ್ಲಾಸು ಮಾಡಿ ಇಡೀ ರಾಜ್ಯದಲ್ಲಿ ಏಕರೂಪತೆಯ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು ನಡೆಸಿದರು. ಏಕರೂಪತೆಯ ಬಗ್ಗೆ ಮತ್ತೊಂದು ಹೆಚ್ಚಿನ ವಿಚಾರವಿದೆ. ಅದು ಯಾವುದೆಂದರೆ 11ನೆಯ ಕ್ಲಾಸು ಮಾಡುವುದು. 4 ವರ್ಷ ಮಾಡುತ್ತೇವೆಂದು 1959ರಲ್ಲೇ ಹೇಳಿರುವಾಗ ಕಾರ್ಯರೂಪಕ್ಕೆ ತರಬೇಕಾದ್ದು ಅವಶ್ಯಕ ವಾಗಿದೆ. ಸಾಧಾರಣವಾಗಿ ಅದನ್ನು 1963-64 ರಲ್ಲೇ ಜಾರಿಗೆ ತರಬಹುದಾಗಿತ್ತು. ಆದರೆ ಕೇಂದ್ರ ಸರ್ಕಾರ ಸ್ವಲ್ಪ ತಡೆಹಿಡಿಯಿರಿ ಎಂದು ಹೇಳಿದ್ದರಿಂದ ಒಂದು ವರ್ಷ ಹಿಂದಕ್ಕೆ ಹಾಕಿದೆ. 1964-65 ರಲ್ಲಿ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಆ ವಿಚಾರದಲ್ಲಿ ಬಹಳ ತೊಂದರೆ ಇರುವುದರಿಂದ ಅದನ್ನು ನಿವಾರಣೆ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತಿದೆ.

ಯೂನಿವರ್ಸಿಟಿ ವಿದ್ಯಾಭ್ಯಾಸದಲ್ಲೂ ಏಕರೂಪತೆ ಇರಬೇಕೆಂದು 4 ವರ್ಷಗಳಿಂದ ಪ್ರಯತ್ನ ಮಾಡಲಾಗುತ್ತಿದೆ. ಎರಡು ಯೂನಿವರ್ಸಿಟಿಗಳ ವೈಸ್‌ಛಾನ್ಸಲರುಗಳೂ ಮತ್ತು ಸಿಂಡಿಕೇಟಿನವರೂ ಒಪ್ಪಿದ್ದಾರೆ. ಆದರೆ ಮೈಸೂರಿನ ಅಕೆಡೆಮಿಕ್ ಕೌನ್ಸಿಲ್ ಒಪ್ಪಿಲ್ಲ; ಅದರಿಂದ ತಡವಾಗಿದೆ. ಈ ವಿಚಾರವನ್ನು ಪರಿಶೀಲಿಸಿ ವರದಿ ಮಾಡಲು ಹೊಸದಾಗಿ ಲಕ್ಷ್ಮಣಸ್ವಾಮಿ ಮೊದಲಿಯಾರ್ ಸಮಿತಿ ಯನ್ನು ಸಹ ನೇಮಕಮಾಡಿದೆ. ಪ್ರಾಥಮಿಕ ವಿದ್ಯಾಭ್ಯಾಸವು ಯೂನಿಫಾರಂ ಆಗಿರಬೇಕೆಂದು ಮಾನ್ಯ ಸದಸ್ಯರು ಸಲಹೆಮಾಡಿದಂತೆ ಜಾರಿಗೆ ತರಲು ಒಂದು ಬಿಲ್ಲನ್ನು ತರಬೇಕೆಂದಿದ್ದೆವು. ಆದರೆ ಅಷ್ಟರಲ್ಲೇ ಕೊಂಡಜ್ಜಿ ಬಸಪ್ಪ ಕಮಿಟಿಯ ವರದಿಯು ಬಂದುದರಿಂದ ಆ ಕೆಲಸವನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ. ಆ ವರದಿಯನ್ನು ಪರಿಶೀಲಿಸಿ ವಿಕೇಂದ್ರೀಕರಣ ಮಾಡುವ ಬಗ್ಗೆ ಸರ್ಕಾರ

(ಶ್ರೀ ಎಸ್. ಆರ್. ಕಂಠಿ)

ಒಂದು ನಿರ್ಣಯವನ್ನು ಕೈಕೊಳ್ಳುವುದು. ಪ್ರೈಮರಿ ವಿದ್ಯಾಭ್ಯಾಸದಲ್ಲಿ ಏಕರೂಪತೆಯನ್ನು ಸಾಧಿಸಲು ಮೂಲಭೂತವಾದ ಕೆಲವು ತೊಂದರೆಗಳಿವೆ. ಮುಂಬಯಿ ಕರ್ಣಾಟಕದಲ್ಲಿ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡುಗಳು ಅವನ್ನು ನಡೆಸುತ್ತಿದ್ದುವು, ಈಗ ಸರ್ಕಾರ ನಡೆಸುತ್ತಿದೆ. ಕಾನೂನಿನ ಪ್ರಕಾರ ಅವನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಡಿಸ್ಟ್ರಿಕ್ಟ್ ಬೋರ್ಡುಗಳನ್ನು ದಕ್ಷಿಣ ಕನ್ನಡ ಮತ್ತು ಬಳ್ಳಾರಿಗಳಲ್ಲಿ ತೆಗೆದ ಮೇಲೆ ಸರ್ಕಾರ ಅದರ ಟ್ರಸ್ಟಿಯಾಗಿ ನಡೆಸುತ್ತಿದೆ. ಆದುದರಿಂದ ಬೇರೆ ಬೇರೆ ರೀತಿಯಲ್ಲಿದೆ. ಮತ್ತು ಕ್ವಾಂಟಂ ಆಫ್ ಗ್ರಾಂಟ್ ಕೂಡ ಬೇರೆ ಬೇರೆ ರೀತಿಯಲ್ಲಿವೆ. ದಕ್ಷಿಣ ಕನ್ನಡದಲ್ಲಿ ಮುಂಬಯಿ ಪ್ರಾಂತದಲ್ಲಿ ಸೇಕಡ ನೂರರಷ್ಟು ಗ್ರಾಂಟಿದೆ, ಹೈದರಬಾದು ಪ್ರಾಂತದಲ್ಲಿ ಸೇಕಡ 80 ರಷ್ಟಿದೆ, ಹಳೇ ಮೈಸೂರಿನಲ್ಲಿ ಪ್ರೈವೇಟ್ ಪ್ರೈಮರಿ ಶಾಲೆಗಳಿಗೆ ಸೇಕಡ 75 ರಷ್ಟಿದೆ. ಅದನ್ನೆಲ್ಲಾ ಒಂದೇ ರೀತಿ ಮಾಡಲು ಪ್ರಯತ್ನ ಮಾಡಿ ಈಗ ಒಂದೇ ನೀತಿಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರ ತೀರ್ಮಾನಿಸಿದೆ. ಅದು ವಿಳಂಬವಾಗುವುದಕ್ಕೆ ಕಾರಣ ಬೇರೆ ಬೇರೆ ಕಾನೂನಗಳಿದ್ದು ಅವು ಯಾವರೀತಿ ಅಡ್ಡ ಬರುತ್ತವೆ ಎಂದು ನೋಡಲು ಕಾಲಾವಕಾಶ ಬೇಕಾಗಿತ್ತು. ಕ್ವಾಂಟಂ ಆಫ್ ಗ್ರಾಂಟ್ ಒಂದೇ ರೀತಿಯಲ್ಲಿರಬೇಕೆಂದು ಸರ್ಕಾರ ಈಗ ಒಂದು ನಿರ್ಣಯ ಮಾಡುತ್ತಿದೆ. ಅದಾದರೆ ಸರಿಹೋಗುತ್ತದೆ. ಆದರೆ ಪ್ರಾಥಮಿಕ ಶಾಲೆಗಳನ್ನು ಯಾರು ನಡೆಸಬೇಕು ಮತ್ತು ಹೇಗೆ ನಡೆಸಬೇಕು ಎಂಬ ವಿಚಾರ ಕೊಂಡಜ್ಜಿ ಬಸಪ್ಪ ಸಮಿತಿ ವರದಿಯ ಸಂಬಂಧವಾದ ನಿರ್ಣಯವನ್ನು ಅವಲಂಬಿಸಿರುವುದರಿಂದ ಈಗ ಆ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲ. ಸಾಧ್ಯವಿರುವಷ್ಟನ್ನು ಈಗ ಮಾಡಲಾಗಿದೆ. ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಕ್ವಾಂಟಂ ಆಫ್ ಗ್ರಾಂಟ್ ಏಕರೂಪವಾಗಿದೆ. ಕಾಲೇಜುಗಳಿಗೆ ಸಂಬಂಧಪಟ್ಟಂತೆ ಯೂನಿಫಾರಂ ಗ್ರಾಂಟ್ ಇನ್ ಏಡ್ ಕೋಡು ಕೂಡ ಇನ್ನೂ ಹೊರ ಬರಲಿಲ್ಲ. ಇಷ್ಟರಲ್ಲೇ ಬರವುದರಲ್ಲಿದೆ. ಇದು ತಡ ವಾಗಲಿಕ್ಕೆ ಕೆಲವು ಕಾರಣಗಳೂ ಇವೆ. ಇನ್ನೊಂದು ವಾರ ಅಥವಾ ಹದಿನೈದು ದಿನಗಳಲ್ಲಿ ಇದು ಹೊರ ಬರುತ್ತದೆ. ಆಗ ಇದರ ಏಕರೂಪತೆಯೂ ಕೂಡ ಆಗುತ್ತದೆ ಎಂದು ನಾನು ತಿಳಿದು ಕೊಂಡಿದ್ದೇನೆ.

ಇನ್ನು ಮೈಸೂರು ಯೂನಿವರ್ಸಿಟಿ ಮತ್ತು ಕರ್ನಾಟಕದ ಯೂನಿವರ್ಸಿಟಿಗಳ ಬಗ್ಗೆ ಕಾಮನ್ ರೂಲ್ಸ್ ಮಾಡಿ ಏಕೆ ಜಾರಿಗೆ ತರಬಾರದು ಎಂದು ಕೆಲವು ಸದಸ್ಯರುಗಳು ಇಲ್ಲಿ ಹೇಳಿದ್ದಾರೆ. ಈ ಬಗ್ಗೆ ಹೇಳಬೇಕಾದರೆ, ಕರ್ನಾಟಕ ಯೂನಿವರ್ಸಿಟಿ ಆಕ್ಟಿಗೆ ಮತ್ತು ಮೈಸೂರು ಯೂನಿವರ್ಸಿಟಿ ಆಕ್ಟಿಗಳಿಗೆ ಅಮೆಂಡುಮೆಂಟುಗಳನ್ನು ಮಾಡುವುದಕ್ಕಾಗಿ ಸರಕಾರ ಕಮಿಟಿಗಳನ್ನು ನೇಮಕ ಮಾಡಿತ್ತು. ಈ ಎರಡು ಕಮಿಟಿಗಳವರೂ ಸರ್ಕಾರಕ್ಕೆ ಈಗ ರಿಪೋರ್ಟುಗಳನ್ನು ಕೊಟ್ಟಿದ್ದಾರೆ. ಇದಾದ ನಂತರ ನಾನು ಈ ಎರಡು ಯೂನಿವರ್ಸಿಟಿಗಳ ವೈಸ್ ಚಾನ್ಸಲರುಗಳನ್ನೂ ಕರೆಸಿ ಅವರ ಜೊತೆಯಲ್ಲಿ ಮಾತನಾಡಿದ್ದೇನೆ ಮತ್ತು ಅದರಂತೆ ಕೆಲವು ನಿರ್ಣಯಗಳಿಗೂ ಬಂದಿದ್ದೇವೆ. ಕರ್ನಾಟಕ ಯೂನಿವರ್ಸಿಟಿ ಮತ್ತು ಮೈಸೂರು ಯೂನಿವರ್ಸಿಟಿಗಳಲ್ಲಿ ಸಿಂಡಿಕೇಟು, ಸೆನೇಟು ಮತ್ತು ಅಕಾಡೆಮಿಕ್ ಕೌನ್ಸಿಲ್ಲುಗಳಲ್ಲಿ ಒಂದೇ ತರಹದ ಪರ್ಸನಲ್ ಇರುವಂತಹ ಬಾಡಿಗಳನ್ನು ರಚಿಸಬೇಕು ಮತ್ತು ಅವುಗಳ ಅಧಿಕಾರಗಳು ಎರಡೂ ಯೂನಿವರ್ಸಿಟಿಗಳಲ್ಲಿಯೂ ಒಂದೇ ರೀತಿಯಲ್ಲಿರಬೇಕು ಎಂದು.

ಶ್ರೀ ಜಿ. ವಿ. ಗೌಡ (ಪಾಳ್ಯ).—ಎರಡೂ ಯೂನಿವರ್ಸಿಟಿಗಳಿಗಾಗಿ ಒಂದೇ ಸಿಂಗಲ್ ಆಕ್ಟು ಏಕೆ ಮಾಡಬಾರದು ?

ಶ್ರೀ ಎಸ್. ಆರ್. ಕಂಠಿ.—ಎರಡಕ್ಕೂ ಒಂದೇ ಆಕ್ಟು ಏಕೆ ಆಗಬಾರದು ಎನ್ನುವ ವಿಚಾರವೂ ಇತ್ತು. ಈಗ ಕೇಂದ್ರ ಸರ್ಕಾರದಿಂದ ಒಂದು ಮಾಡಲ್ ಆಕ್ಟು ಬರುವುದರಲ್ಲಿದೆ. ಅದು ಬಂದ ಮೇಲೆ ಅದನ್ನು ನೋಡಿಕೊಂಡು ಇಲ್ಲಿಯೂ ಯಾವ ರೀತಿಯಾದ ಆಕ್ಟು ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡೋಣ ಎಂಬ ಯೋಚನೆಯೂ ಇದೆ.

ಇನ್ನು ಶ್ರೀಮಾನ್ ಕೃಷ್ಣರವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಮಂತ್ರಿಗಳು ಕರ್ನಾಟಕ ಯೂನಿವರ್ಸಿಟಿಯವರ ಕಡೆಗೇ ಹೆಚ್ಚು ಗಮನ ಕೊಡುತ್ತಿದ್ದಾರೆ, ಮತ್ತು ಅವರಿಗೆ ಬಹಳವಾಗಿ ಸಹಾಯ ಮಾಡುತ್ತಾರೆ; ಆದರೆ ಮೈಸೂರು ಯೂನಿವರ್ಸಿಟಿಗೆ ಹಾಗೆ ಮಾಡುತ್ತಿಲ್ಲ ವೆಂದು ಹೇಳಿದರು. ಅವರು ನನ್ನ ನಡತೆಯ ಬಗ್ಗೆ ಯಾವ ಆಧಾರದಿಂದ ಈ ನಿರ್ಣಯಕ್ಕೆ ಬಂದರು ಎನ್ನುವುದನ್ನು ನಾನು ಹೇಳಲಾರೆ. ಆದರೆ ಇದು ಸರಿಯಾದ ಭಾವನೆಯಲ್ಲ ಮತ್ತು ಇದನ್ನು ನಾನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಇದರಲ್ಲಿ ಹೇಳಬೇಕೆಂದರೆ.........

ಶ್ರೀ ಎಸ್. ಶಿವಪ್ಪ.—ಸ್ವಲ್ಪ ಜಾಸ್ತಿ ಇರಬಹುದು. (ನಗು)

ಶ್ರೀ ಎಸ್. ಆರ್. ಕಂಠಿ.—ಸ್ವಲ್ಪ ಎಂದರೆ ಇಲ್ಲ ಎಂದು (ನಗು)

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಹಾಗಾದರೆ ನಿಮ್ಮ ಯೂನಿವರ್ಸಿಟಿಯ ಮೇಲೆ ನಿಮಗೇ ಮಮತೆ ಇಲ್ಲ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಕರ್ಣಾಟಕ ಯೂನಿವರ್ಸಿಟಿಯ ಮೇಲೆ ಎಷ್ಟು ಅಭಿಮಾನವಿದೆಯೋ ಅಷ್ಟೇ ಅಭಿಮಾನ ಮೈಸೂರು ಯೂನಿವರ್ಸಿಟಿಯ ವಿಷಯದಲ್ಲಿಯೂ ಇದೆ. ಈಗ ತಾವು ಯೂನಿವರ್ಸಿಟಿ ಗ್ರಾಂಟುಗಳ ವಿಚಾರವಾಗಿ ಹೇಳಿದಿರಿ. ಇಲ್ಲಿ ಎರಡು ತರದ ವಿಚಾರಗಳಿವೆ. ಒಂದು ಬ್ಲಾಕು ಗ್ರಾಂಟು ಇನ್ನೊಂದು ಡೆವಲಪ್‌ಮೆಂಟು ಗ್ರಾಂಟು. ಮೈಸೂರು ಯೂನಿವರ್ಸಿಟಿಗೆ ಬ್ಲಾಕು ಗ್ರಾಂಟಾಗಿ 35 ಲಕ್ಷ ರೂಪಾಯಿಗಳಷ್ಟು, ಕರ್ನಾಟಕ ಯೂನಿವರ್ಸಿಟಿಗಾಗಿ 18 ಲಕ್ಷ ಎಂದು ಕೊಡಲಾಗಿದೆ. ಹೀಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಕಾರಣವೇನೆಂದರೆ, ಇದಕ್ಕೆ ಒಂದು ಇತಿಹಾಸವೇ ಇದೆ. ಫೈನಾನ್ಸ್ ಸೆಕ್ರೆಟೇರಿಯಟ್ಟಿನಲ್ಲಿ ಡೆಪ್ಯೂಟಿ ಫೈನಾನ್ಸ್ ಸೆಕ್ರೆಟರಿಗಳಾಗಿ ಕೆಲಸ ಮಾಡುತ್ತಿರುವ ಶ್ರೀಮಾನ್ ಭರತ್ ಅವರು ಎರಡೂ ಯೂನಿವರ್ಸಿಟಿಗಳಿಗೆ ಹೋಗಿ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಡನೆ ಕಲೆತು ವಿಚಾರ ಮಾಡಿ, ಇದು ಸರಿಯಾಗಿರಬೇಕೇ ಬೇಡವೇ ಮತ್ತು ಇವರಿಗೆ ಎಷ್ಟು ಹಣ ಪೂರೈಸುವುದಕ್ಕೆ ಸಾಧ್ಯ ಎನುವುದನ್ನು ಯೋಚನೆ ಮಾಡಿ ಒಂದು ಸರ್ವಸಮ್ಮತವಾದ ರಿಪೋರ್ಟನ್ನು ಸರ್ಕಾರಕ್ಕೆ ಬರೆದು ಕೊಟ್ಟಿದ್ದಾರೆ. ಆ ರಿಪೋರ್ಟಿನಲ್ಲಿರುವಂತೆಯೇ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆರೀತಿ 35 ಲಕ್ಷ ಮತ್ತು 18 ಲಕ್ಷದಷ್ಟು ಹಣವನ್ನು ಪಡೆಯಲು ಎರಡೂ ಯೂನಿವರ್ಸಿಟಿಗಳವರು ಒಪ್ಪಿಕೊಂಡು ಅದರಂತೆ ಕೆಲಸಗಳನ್ನು ನಡೆಸುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಮೊದಲು ಅವರು ಎಷ್ಟು ಕೇಳಿದ್ದರು ?

ಶ್ರೀ ಎಸ್. ಆರ್. ಕಂಠಿ.—ಮೊದಲಿಗೆ 38 ಲಕ್ಷದಷ್ಟು ಕೊಡಿ ಎಂದು ಕೇಳುತ್ತಿದ್ದರು. ಆದರೆ ಈಚೆಗೆ ಚರ್ಚೆ ನಡೆಸಿದ ಮೇಲೆ ಮೈಸೂರು ಯೂನಿವರ್ಸಿಟಿಯವರು 38 ಲಕ್ಷ ಕೇಳಿದ್ದರೂ, ಅವರು 35 ಲಕ್ಷಕ್ಕೆ ಒಪ್ಪಿದರು ಮತ್ತು ಕರ್ನಾಟಕ ಯೂನಿವರ್ಸಿಟಿಯವರು 22 ಲಕ್ಷದಷ್ಟು ಕೇಳಿದ್ದರೂ' 18 ಲಕ್ಷಕ್ಕೆ ಒಪ್ಪಿದರು. ಹೀಗೆ ಶ್ರೀ ಭರತ್‌ರವರೊಡನೆ ಚರ್ಚೆ ಮಾಡಿ ಇಂತಹ ಒಂದು ನಿರ್ಣಯಕ್ಕೆ ಬಂದಂತಾಗಿದೆ. ಇದು ಕೂಡ ನಾನು ಎಜುಕೇಷನ್ನು ಮಿನಿಷ್ಟರಾಗಿ ಬಂದಾಗ ಆದುದಲ್ಲ. ಅದಕ್ಕೆ ಪೂರ್ವದಲ್ಲಿಯೇ ಆಗಿದೆ. ಆದುದರಿಂದ ಇದನ್ನು ನಾನು ಮಾಡಿದ್ದು ಎನ್ನುವ ವಾದ ಸರಿಯಾದುದಲ್ಲ.

Sri C. J. MUCKANNAPPA (Sira).—Is it on the strength of students or is it only discretionary only ?

ಶ್ರೀ ಎಸ್. ಆರ್. ಕಂಠಿ.—ಇದು ಮಾಡಿರುವುದು ಅಲ್ಲಿರುವ ಸ್ಟೂಡೆಂಟುಗಳ ಸಂಖ್ಯೆಯ ಮೇಲೆ ಮಾತ್ರ ಅಲ್ಲ. ಯೂನಿವರ್ಸಿಟಿಯ ಮೂಲಕ ನಡೆಸುವ ಕಾಲೇಜುಗಳು ಬಹಳ ಕಡಮೆ ಇವೆ. ಮೈಸೂರು ಯೂನಿವರ್ಸಿಟಿಯ ಮೂಲಕ ನಡೆಯುವ ಕಾಲೇಜುಗಳು ಮೂರು ಮಾತ್ರ ಇವೆ. ಅದರಂತೆ ಕರ್ನಾಟಕ ಯೂನಿವರ್ಸಿಟಿಯವರ ಮೂಲಕ ನಡೆಯುವ ಕಾಲೇಜುಗಳೂ ಮೂರು ಮಾತ್ರ. ಇದರ ಮೇಲೆ ಅವರ ಎಸ್ಟಾಬ್ಲಿಷ್‌ಮೆಂಟು ಖರ್ಚು, ವೈಸ್ ಚಾನ್ಸಲರುಗಳ ಸಂಬಳ ಹಾಗೇ ಮಾನಸ ಗಂಗೋತ್ರಿಯಲ್ಲಿ ನಡೆಸುತ್ತಿರುವ ಪೋಸ್ಟು ಗ್ರಾಜುಯೇಟು ಶಿಕ್ಷಣದ ಖರ್ಚು ಇವನ್ನೆಲ್ಲಾ ನೋಡಿ ಮಾಡಬೇಕಾಗುತ್ತದೆ. ಈಗ ಕ್ಷೇತ್ರ ವಿಶಾಲವಾಗಿರುವುದರಿಂದ ಎಷ್ಟು ವಿದ್ಯಾರ್ಥಿಗಳು ಇರುತ್ತಾರೋ ಅದರ ಮೇಲೆ ಹೋಗುತ್ತದೆ. ಇದಲ್ಲದೆ, ಪ್ರತಿಯೊಂದು ಕಾಲೇಜಿಗೂ ಮೇಂಟೆನೆನ್ಸು ಗ್ರಾಂಟು ಬೇರೆ ಕೊಡುತ್ತೇವೆ. ಇದನ್ನೆಲ್ಲಾ ತೆಗೆದುಕೊಂಡು ಯೂನಿವರ್ಸಿಟಿಗಳಲ್ಲಿ ಖರ್ಚು ಮಾಡಬೇಕಾಗಿ ಬರುತ್ತದೆ. ಈ ರೀತಿ 35 ಲಕ್ಷ ಮತ್ತು 18 ಲಕ್ಷ ಎಂಬುದು ಕಾರ್ಯ ರೂಪದಲ್ಲಿ ಬಂದು ಈಗಾಗಲೇ ಮೂರು ವರ್ಷಗಳಾದುವು. ಮತ್ತೆ ಡೆವಲಪ್‌ಮೆಂಟು ಗ್ರಾಂಟಿನ ಬಗ್ಗೆ ವಿಚಾರ ಮಾಡುತ್ತಾ ಮಾನ್ಯ ಸದಸ್ಯರು ಇಲ್ಲಿ ಒಂದು ತರಹದ ವಾದವನ್ನೆತ್ತಿದ್ದಾರೆ, ಪ್ರತಿಯೊಂದು ಯೂನಿವರ್ಸಿಟಿಗೂ 35 ಲಕ್ಷ ದಷ್ಟು ಡೆವಲಪ್‌ಮೆಂಟು ಗ್ರಾಂಟನ್ನು ಕೊಡಬೇಕೆಂದು ಮೂರನೇ ಪ್ಲಾನಿನಲ್ಲೇ ಕೊಡಬೇಕು ಎಂದು 1961 ರಲ್ಲಿಯೇ ಒಂದು ನಿರ್ಣಯವಾಗಿದೆ. ಅದೇ ಪ್ರಕಾರವಾಗಿ ಸರ್ಕಾರದವರು ಈಗ ಕೊಡು ತ್ತಿದ್ದಾರೆ. 35 ಲಕ್ಷ ರೂಪಾಯಿಗಳನ್ನು ಡೆವಲಪ್‌ಮೆಂಟು ಗ್ರಾಂಟಾಗಿ ಯಾವ ರೀತಿಯಾಗಿ ಕೊಟ್ಟರು ಮತ್ತು ಯಾವ ವರ್ಷದಲ್ಲಿ ಎನ್ನುವ ವಿವರಗಳು ಈ ರೀತಿ ಇವೆ. 1961–62ನೇ ಸಾಲಿಗಾಗಿ ಎರಡೂ ಯೂನಿವರ್ಸಿಟಿಗಾಗಿ 8 ಲಕ್ಷ ಮತ್ತು 8 ಲಕ್ಷ ಎಂದು ಕೊಡಲಾಗಿದೆ. 1962–63ನೇ ಸಾಲಿನಲ್ಲಿ 12 ಲಕ್ಷ ಮತ್ತು 12 ಲಕ್ಷ ಎಂದು ಎರಡಕ್ಕೂ ಕೊಡಲಾಗಿದೆ. ಆಮೇಲೆ 1963-64ನೇಯ ಸಾಲಿಗಾಗಿ 7·25 ಲಕ್ಷ ಎಂದು ಎರಡಕ್ಕೂ ಕೊಡಲಾಗಿದೆ. ಈ ಯೂನಿವರ್ಸಿಟಿಗೆ ಕೊಡಬೇಕಾಗಿರುವುದು 7·75 ಲಕ್ಷ ದಷ್ಟು ಮಾತ್ರ. ಇದನ್ನು ಇನ್ನು ಎರಡು ವರ್ಷಗಳಲ್ಲಿ ಕೊಡಬೇಕಾಗಿದೆ. ಇದನ್ನು ಕೊಡುವುದಕ್ಕೆ ಸರ್ಕಾರದವರೂ ಒಪ್ಪಿದ್ದಾರೆ. ಇದರಲ್ಲೇನೋ ಮಹಾ ವಿಷಯವಿದೆ ಎನ್ನುವ ಮಾತು ಸಾಧು ವಾದುದಲ್ಲ. ಆಮೇಲೆ ಡೆವಲಪ್‌ಮೆಂಟು ಗ್ರಾಂಟುಗಳನ್ನು ಇವೆರಡು ಯೂನಿವರ್ಸಿಟಿಗಳಿಗೂ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಕೊಡಲಾಗಿದೆ ಎನ್ನುವ ಸ್ಟೇಟುಮೆಂಟು ಇಲ್ಲಿದೆ. ಅದರಂತೆ ಹೇಳುವುದಾದರೆ 1957-58 ನೇ ಸಾಲಿನಲ್ಲಿ ಕರ್ನಾಟಕ ಯೂನಿವರ್ಸಿಟಿಗೆ 5 ಲಕ್ಷ ಮತ್ತು ಮೈಸೂರು

(ಶ್ರೀ ಎಸ್. ಆರ್. ಕಂಠಿ)

ಯೂನಿವರ್ಸಿಟಿಗೆ 1,11,108, 1958-59 ನೇ ಸಾಲಿನಲ್ಲಿ ಕರ್ನಾಟಕ ಯೂನಿವರ್ಸಿಟಿಗೆ 2 ಲಕ್ಷ ಮತ್ತು ಮೈಸೂರು ಯೂನಿವರ್ಸಿಟಿಗೆ 8,30,000, 1959-60ನೇ ಸಾಲಿನಲ್ಲಿ ಕರ್ನಾಟಕ ಯೂನಿವರ್ಸಿಟಿಗೆ10, 5, 900 ಮತ್ತು ಮೈಸೂರು ಯೂನಿವರ್ಸಿಟಿಗೆ 18, 83, 313, 1960-61 ನೇ ಸಾಲಿನಲ್ಲಿಕರ್ನಾಟಕ ಯೂನಿವರ್ಸಿಟಿಗೆ 9 ಲಕ್ಷ ಮತ್ತು ಮೈಸೂರು ಯೂನಿವರ್ಸಿಟಿಗೆ 6,77, 395 ಅನಂತರ1961-62ನೇ ಸಾಲಿಗಾಗಿ ಎರಡು ಯೂನಿವರ್ಸಿಟಿಗಳಿಗೂ8 ಲಕ್ಷ ಮತ್ತು 8 ಲ, 1962-63ನೇ ಸಾಲಿನಲ್ಲಿ 12 ಲಕ್ಷ ಮತ್ತು 12, ಲಕ್ಷ 1963-64 ನೇ ಸಾಲಿನಲ್ಲಿ 7·25 ಲಕ್ಷ ಮತ್ತು 7·25 ಲಕ್ಷಈಪ್ರಕಾರವಾಗಿ ಕೊಡುತ್ತ ಬಂದಿದ್ದೇವೆ. ಯಾವ ರೀತಿಯಾಗಿ ಮೂರನೇ ಪ್ಲಾನಿನಲ್ಲಿ ಹೇಳಲಾಗಿತ್ತೋಅದರಂತೆ ನಿರ್ಧಾರ ಮಾಡಿ ಇವರು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ಯಾರ ಕೈವಾಡಇದೆ ಎಂದು ಹೇಳುವ ಮಾತನ್ನು ನಂಬಲಿಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—1961-62 ನೆಯ ಸಾಲಿನಲ್ಲಿ ಮೈಸೂರು ಯೂನಿವರ್ಸಿಟಿಗಾಗಿ 47 ಲಕ್ಷದಷ್ಟು ಕೊಡಬೇಕೆಂದಿತ್ತು, ಇದೇಕೆ ಕಡಮೆ ಯಾಯಿತು ?

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುವ ಅಂಕಿ ಸಂಖ್ಯೆಗಳು ಈಗ ಇಲ್ಲಿಲ್ಲ. ಬ್ಲಾಕು ಗ್ರ್ಯಾಂಟುಗಳು ಏನು ಎನ್ನು ವಿಚಾರವನ್ನು ಹೇಳುತ್ತಿದ್ದೇನೆ. ತಾವು ಇಲ್ಲಿ ಹೇಳುವ ರಿಪೋರ್ಟು ನನ್ನಲ್ಲಿಲ್ಲ. ರಿಪೋರ್ಟು ತರಿಸಿ ಹಾಗೇನಾದರೂ ಇದೆಯೇ ಎನ್ನುವುದನ್ನು ನೋಡಿಸುತ್ತೇನೆ. ಇಲ್ಲಿ ನನ್ನಲ್ಲಿರುವ ಪಟ್ಟಿಯಂತೆ 1961-62 ನೆಯ ಸಾಲಿಗಾಗಿ ಮೈಸೂರು ಯೂನಿವರ್ಸಿಟಿಗೆ 35 ಲಕ್ಷದಷ್ಟು ಕೊಡಲಾಗಿದೆ ಎಂದು ಇದೆ. ತಾವು ಹೇಳುವುದನ್ನೂ ನೋಡಿಸುತ್ತೇನೆ.

ಆದರೆ ಅವರೀಗ ಹೇಳಿದ್ದನ್ನು ನಾನು ಮತ್ತೆ ನೋಡಿಸುತ್ತೇನೆ ಆದ್ದರಿಂದ ವಿದ್ಯಾಮಂತ್ರಿಗಳು ಒತ್ತಾಯಮಾಡಿ ಇದನ್ನು ಕಡಮೆ ಮಾಡಿಸಿದ್ದಾರೆಂದು ಹೇಳಿದ್ದು ಅಸತ್ಯವಾದ ಮಾತಾಗಿದೆ. ಅವರಿಗಾದರೂ ಸ್ವಲ್ಪ ಕಡಮೆಯಾಗಿದ್ದು, ಇನ್ನೊಬ್ಬರಿಗೆ ಜಾಸ್ತಿಯಾಗಿರಬಹುದು. ಇಲ್ಲವೇ ಇವರಿಗಾದರೂ ಸ್ವಲ್ಪ ಕಡಮೆ ಯಾಗಿ ಅವರಿಗಾದರೂ ಸ್ವಲ್ಪ ಜಾಸ್ತಿಯಾಗಿರಬಹುದು. ಆದರೆ ಇದನ್ನು ಅಲ್ಲಿಗೆಹೋಗಿ ಸ್ವತಃ ನೋಡಿಕೊಂಡುಬಂದ ನಮ್ಮ ಹಣಕಾಸಿನ ಇಲಾಖೆಯ ಕಾರ್ಯದರ್ಶಿಗಳು ಇದನ್ನು ನಿರ್ಧರಿಸಿರುತ್ತಾರೆ.

2-00 P.M.

Sri S. SIVAPPA.—It was agreed between your Secretary and the University. But actually the Government has given only 35 lakhs.

Sri S. R. KANTHI.—This is the figure that has been agreed to, because subsequently they also saw the Education Secretary, Deputy Secretary and myself. They all agreed to 35 lakhs and Sri Sivappa knows it.

ಇದಾದನಂತರ ಇನ್ನು ಆ ವೈಸ್‌ಛಾನ್ಸಲರ್ ನೇಮಕದ ಬಗ್ಗೆ ತಡಮಾಡಿದ್ದಾರೆಂದು ಹೇಳಿದ್ದಾರೆ. ಈಗತಾನೇ ನನಗೆ ಬಂದ ಸುದ್ದಿಯಪ್ರಕಾರ ಇದೇ ತಿಂಗಳು 15ನೇ ತಾರೀಖಿನೊಳಗಾಗಿ ಶ್ರೀಮಾಲಿಯವರು ಇಲ್ಲಿಗೆ ಒಂದು ವೈಸ್‌ಛಾನ್ಸಲರ್ ಆಗಿ ಛಾರ್ಜನ್ನು ತೆಗೆದುಕೊಳ್ಳುತ್ತಾರೆಂದು ತಿಳಿದು ಬಂದಿದೆ. ಆದರೆ ಇದೇನೂ ಅಂಥ ತಡವಲ್ಲ. ದುರಾದೃಷ್ಟದಿಂದ ಶ್ರೀ ಪಣಿಕ್ಕರ್ ಅವರು ತೀರಿಕೊಂಡದ್ದರಿಂದ ಬೇಗ ವೈಸ್‌ಛಾನ್ಸಲರನ್ನು ನೇಮಕಮಾಡಲು ಆಗಲಿಲ್ಲ. ಆದರೂ 3 ತಿಂಗಳು ಮುಗಿಯುವುದರೊಳಗೇ ಬೇರೊಬ್ಬರನ್ನು ನಾವು ನೇಮಕಮಾಡಿದ್ದೇವೆ. ಆದ್ದರಿಂದ ಇದೇನೂ ಅಷ್ಟು ತಡವಲ್ಲ.

ಇನ್ನು ಈಗ ಎದ್ದಿರತಕ್ಕ ಮತ್ತೊಂದು ವಾದವೇನೆಂದರೆ : ಈ ವೈಸ್‌ಛಾನ್ಸಲರ ಹುದ್ದೆಯನ್ನು ಮೈಸೂರಿನವರೊಬ್ಬರಿಗೇ ಕೊಡಬೇಕೆಂಬುದು. ಆದರೆ ಈ ಹಿಂದೆ ಇದೇ ಸಭೆಯಲ್ಲಿ ವಿರೋಧಪಕ್ಷದ ಸದಸ್ಯರೊಬ್ಬರು ಹೊರಗಿನವರನ್ನೇ ತರಬೇಕೆಂದು ಹೇಳುತ್ತಿದ್ದರು. ಹಾಗೇ ನಾವು ಹೊರಗಿನವರೊಬ್ಬರನ್ನು ತಂದಿದ್ದಾಯಿತು. ಆದರೆ ಅವರು ದುರ್ದೈವದಿಂದ ತೀರಿಕೊಂಡರು. ಅವರಿಲ್ಲಿಗೆ ಬಂದು ಕೇವಲ 5 ತಿಂಗಳು ಮಾತ್ರ ಆಗಿತ್ತು. ಆದರೆ ಈ ಮಧ್ಯೇ ಅಂಥ ಕಾಲಬದಲಾವಣೆಯೇನೂ ಆಗಿಲ್ಲ. ಆದಾಗ್ಗೂ ಈಗ ಇಲ್ಲಿಯವರನ್ನೇ ಮೈಸೂರಿನವರೊಬ್ಬರನ್ನೇ ತರಬೇಕೆಂದು ಹೇಳುತ್ತಿದ್ದಾರೆ.

Sri S. SIVAPPA.—Even then I have said that there should be a Mysorean.

Sri S. M. KRISHNA.—I also said the same thing.

Sri S. R. KANTHI.—He is a diehard-Mysorean.

Sri S. M. KRISHNA.—I am proud of it, because we had certain traditions.

Sri S. R. KANTHI.—He must remember that he is an Indian first and a Mysorean second.

ನೀವು ಹಾಗೇ ಮೈಸೂರಿನವರಾಗಿ ಉಳಿಯಿರಿ, ಭಾರತೀಯರಾಗದ್ದಿದರೂ ಚಿಂತೆಯಿಲ್ಲ. ಈ ಹಿಂದೆ ಶ್ರೀ ಮುಕ್ಕಣ್ಣಪ್ಪನವರೂ ಹೊರಗಿನವರನ್ನೇ ಇಲ್ಲಿಗೆ ವೈಸ್‌ಛಾನ್ಸಲರ್‌ನ್ನಾಗಿ ತರಬೇಕೆಂದು ಹೇಳಿದ್ದರು. ಈಗ ಅದರಂತೆಯೇ ನಾವು ಮಾಡಿದ್ದೇವೆ. ಆದರೆ 1959ರಲ್ಲಿ ಮಾಡತಕ್ಕ ಆ ಮೈಸೂರು ಯೂನಿವರ್ಸಿಟಿಯು ಆಕ್ಟ್‌ನಿದೆ ಅದನ್ನು ತಿದ್ದುಪಡಿಮಾಡಿ ಅದರಲ್ಲಿ ಸರ್ಕಾರದ ಅಧಿಕಾರಿಗಳಿರಬಾರದೆಂದು ಮಾಡಿದರೆ ಈ ತೊಂದರೆಗಳೊಂದೂ ಬರುವುದಿಲ್ಲ. ಇನ್ನು ನಾನು ಇಬ್ಬರ್ ವೈಸ್‌ಛಾನ್ಸಲರನ್ನೂ ಕರೆಸಿ ಅವರೊಂದಿಗೆ ಚರ್ಚೆಮಾಡಿದ್ದೇನೆ. ಆ ಕಾಲಕ್ಕೆ ಅಲ್ಲಿ ಶ್ರೀ ಬನುಮಯ್ಯನವರಿದ್ದರು ಆಗ ಅವರು ಹೇಳಿದರು ಸರ್ಕಾರಕ್ಕೆ ವೈಸ್‌ಛಾನ್ಸಲರನ್ನು ಅಪಾಯಿಂಟ್ ಮಾಡಬೇಕೆಂಬ ಇರಾದೆ ಇದ್ದರೂ ಆದಕ್ಕೆ ಅವರು ಒಪ್ಪುತ್ತಿಲ್ಲ. ನಾಮಕರಣ ಪದ್ಧತಿಯು ಇರಬೇಕೆಂದು ಅವರು ಹೇಳುತ್ತಾರೆ. ಇನ್ನು ಹೊರಗಿನವರು ಬಂದಾಗ್ಗೂ ಅವರು ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದವರಾಗಿದ್ದಾರೆ. ಆದ್ದರಿಂದ ಅವರನ್ನೇಕೆ ನೇಮಕಮಾಡಬೇಕು ಎಂಬ ಒಂದು ವಾದ ಎದ್ದಿದೆ. ಆದರೆ ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದರೆ ಅವರು ಬೇರೆ ಯಾವ ಹುದ್ದೆಯನ್ನೂ ಅಂಗೀಕಾರಮಾಡಕೂಡದೆಂದು ಎಲ್ಲಿಯೂ ಹೇಳಿಲ್ಲ.

ಯಾರೇ ಬರಲಿ ಅವರು ದೇಶದ ಕೆಲಸವನ್ನು ಮಾಡುತ್ತಾರೆ. ಆದರೆ ಇಲ್ಲಿ ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸುತ್ತಿರುವ ಅಭಿಪ್ರಾಯವನ್ನು ನೋಡಿದರೆ ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದವರಿಗೆ ಚೀಟಿಕೊಟ್ಟು ಅವರನ್ನು ನೇರವಾಗಿ ಸ್ವರ್ಗಕ್ಕೇ ಕಳುಹಿಸಿಬಿಡಬೇಕು ಎಂಬುದಾಗಿದ್ದಂತೆ ಕಂಡುಬರುತ್ತಿದೆ.

ಶ್ರೀ ಎಸ್. ಎಂ. ಕೃಷ್ಣ.—ಈಗ ಅಜೀತಪ್ರಸಾದರನ್ನು ಮಂತ್ರಿಗಳಾಗಿ ಮಾಡಿದಂತೆ ಅವರನ್ನು ಮೈಸೂರಿನ ವಿದ್ಯಾಮಂತ್ರಿಗಳನ್ನಾಗಿ ಏಕೆ ಮಾಡಬಾರದಾಗಿತ್ತು ?

ಶ್ರೀ ಎಸ್. ಆರ್. ಕಂಠಿ.—ಆ ರೀತಿವಾದಮಾಡುವುದು ಸರಿಯಾದ್ದಲ್ಲ. ಈಗ ನೇಮಕವಾಗಿರತಕ್ಕವರು ತಮ್ಮ ಇಡೀ ಜೀವನವನ್ನೇ ಈ ಶಿಕ್ಷಣರಂಗದಲ್ಲಿ ಕಳೆದಿದ್ದಾರೆ. ಅವರು ಎಕ್ಸ್‌ಪರ್ಟ್ ಎಜುಕೇಷನಲಿಸ್ಟ್. ಅವರು ಕಾಮರಾಜ್ ಪ್ಲಾನಿನಿಂದ ಹೊರಗೆ ಬಂದವರೆಂದು ಅವರನ್ನು ಕಡೆಗಾಣಿಸುವುದು ಸರಿಯಲ್ಲ.

ಇನ್ನು ಶ್ರೀ ಜಿ. ವಿ. ಗೌಡರು ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಬಹಳ ಕಡಿಮೆಯಾಗುತ್ತಿದೆ ಎಂದು ಹೇಳಿದ್ದಾರೆ......

ಶ್ರೀ ಎಸ್. ಶಿವಪ್ಪ.—ಈಗ ಬರತಕ್ಕ ವೈಸ್‌ಛಾನ್ಸಲರಿಗೆ ಸಂಬಳವೆಷ್ಟು ?

ಶ್ರೀ ಎಸ್. ಆರ್. ಕಂಠಿ.—ಹಿಂದಿನವರಿಗೇನು ಸಂಬಳವಿತ್ತೋ, ಮತ್ತು ಅವರಿಗೇನು ಕಂಡೀಷನ್‌ಗಳಿದ್ದವೋ ಅವುಗಳನ್ನೇ ಇವರಿಗೂ ಹಾಕಲಾಗಿದೆ. ಇವರ ಟರ್ಮ್ ಮೂರು ವರ್ಷ.

ಇನ್ನು ಪ್ರಾಥಮಿಕ ಶಾಲೆಗಳ ಹಾಜರಾತಿಯನ್ನು ಪ್ರಶ್ನೆಮಾಡಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಇದಕ್ಕೆ ಸರ್ಕಾರ ಹೆಚ್ಚಿನ ಗಮನ ಕೊಡುತ್ತದೆಂದು ಹೇಳುತ್ತೇನೆ. ಕೆಲವು ಭಾಗಗಳಲ್ಲಿ ಈ ರೀತಿ ಹಾಜರಾತಿ ಕಡಮೆಯಾಗಿದೆ. ಕೆಲವು ದೊಡ್ಡ ಊರುಗಳಲ್ಲೂ ಸ್ಲಂ ಇರತಕ್ಕ ಕಡೆ ಈ ರೀತಿ ಕಡಮೆಯಾಗಿದೆ. ಅದಕ್ಕಾಗಿ ನಾವೀಗ ಇನ್‌ಸ್ಪೆಕ್ಟೊರೇಟನ್ನು ರ್‍ಯಾಷನಲೈಜ್‌ಮಾಡಬೇಕೆಂದಿದ್ದೇವೆ.

ಇನ್ನು ಬೆಟರ್‌ಮೆಂಟ್ ಕಮಿಟಿಗಳು ಎಂದು ಏನಿವೆ ಅವುಗಳ ಕಡೆಗೂ, ಪಂಚಾಯಿತಿ ಕಮಿಟಿಗಳು, ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡ್‌ಗಳು, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳು, ಇವುಗಳ ಕಡೆಗೂ ಸ್ವಲ್ಪ ಮಟ್ಟಿಗೆ ಮಾನ್ಯ ಸದಸ್ಯರು ಗಮನ ಕೊಟ್ಟರೆ ಒಳ್ಳೆಯದಾಗುತ್ತದೆ. ಕೆಲವು ಕಡೆಗಳಲ್ಲಿ ಬೆಟರ್‌ಮೆಂಟ್ ಕಮಿಟಿಗಳು ಬಹಳ ಚೆನ್ನಾಗಿ ಕೆಲಸ ಮಾಡಿವೆ. ಇನ್ನು ಶಾಲೆಗೆ ಹೋಗುವ ಮಕ್ಕಳಿಗೆ ವಿದ್ಯೆಗಾಗಿ ವ್ಯವಸ್ಥೆ ಮಾಡುವ ಬಗ್ಗೆ ಆ ಕಮಿಟಿಯವರ ಜೊತೆಯಲ್ಲಿ ಸ್ಥಳೀಯ ಸಂಸ್ಥೆಗಳು ಹಾಗೂ ಈ ಸಭೆಯ ಮಾನ್ಯ ಸದಸ್ಯರುಗಳು ಸ್ವಲ್ಪ ಮಟ್ಟಿಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಹುಡುಗರನ್ನು ಶಾಲೆಗೆ ಬರುವಂತೆ ಮಾಡುವುದಕ್ಕಾಗಿ, ಆಕರ್ಷಕವಾದ ರೀತಿಯಲ್ಲಿ ಶಿಕ್ಷಕರೇ ವ್ಯವಸ್ಥೆ ಮಾಡಬೇಕೆಂದು ಸರಕಾರದವರು ಅವರನ್ನು ಕೇಳಿಕೊಂಡಿದ್ದಾರೆಂಬ ಸಂಗತಿಯನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

(ಶ್ರೀ ಎಸ್. ಆರ್. ಕಂಠಿ)

ಮೂರನೆಯದಾಗಿ, ನಾವು ಈಗ ಶಾಲಾ ಕಟ್ಟಡಗಳನ್ನು ಆಕರ್ಷಿತವಾದ ರೀತಿಯಲ್ಲಿ ಇಡದಿದ್ದರೆ ಮಕ್ಕಳಿಗೆ ತಮ್ಮ ಮನೆಗೂ, ಶಾಲೆಗೂ ಏನೂ ವ್ಯತ್ಯಾಸವಿಲ್ಲವೆಂಬ ಭಾವನೆ ಬರುತ್ತದೆ. ಆದ್ದರಿಂದ ಶಾಲಾ ಕಟ್ಟಡಗಳನ್ನು ಆದಷ್ಟು ಚೆನ್ನಾಗಿ ಇಡಬೇಕೆಂದು ಸೂಚನೆಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಆದರೂ ಇದು ಬಹಳ ದೊಡ್ಡದಾದಂಥ ಪ್ರಶ್ನೆ. ಲೆಖ್ಖ ಹಾಕಿದರೆ ಪ್ರಾಥಮಿಕ ಶಾಲಾ ಕಟ್ಟಡಕ್ಕೆ 30 ರಿಂದ 40 ಕೋಟಿ ರೂಪಾಯಿಗಳವರೆಗೂ ಹಣ ಬೇಕಾಗುತ್ತದೆ. ಇದು ಬಹಳ ದೊಡ್ಡದಾದಂಥ ಕೆಲಸ. ಪ್ಲಾನಿನಲ್ಲಿಯೇ ಸುಮಾರು 10 ಲಕ್ಷ ರೂಪಾಯಿಗಳು ಶಾಲೆಗೆ ಬೇಕಾಗುತ್ತವೆ. ಸಾಧಾರಣವಾಗಿ ಒಂದು ಶಾಲಾ ಕೊಠಡಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೂ ಸರ್ಕಾರಕ್ಕೆ 2-2½ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಬಹಳ ದೊಡ್ಡ ಸಮಸ್ಯೆಗಳಲ್ಲಿ ಇದೂ ಒಂದಾಗಿದೆ. ಕೇಂದ್ರ ಸರ್ಕಾರದವರಲ್ಲಿ ಆದಷ್ಟು ಪ್ರಯತ್ನ ಮಾಡಿ ಸ್ವಲ್ಪ ಮಟ್ಟಿಗೆ ಈ ಬಗ್ಗೆ ಸಾಲ ಕೊಡಬೇಕೆಂದು ಅವರಿಗೆ ಹೇಳಿದ್ದೇವೆ. ಮೊದಲನೆ ಕಂತು 25 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹೆಚ್ಚು ಅಂದರೆ ಸುಮಾರು ಒಂದು ಕೋಟಿ ರೂಪಾಯಿಗಳವರೆಗೂ ಸಾಲ ಕೊಡುತ್ತೇವೆಂದು ಹೇಳಿದ್ದಾರೆ. ಇದೂ ಅಲ್ಲದೆ ಎಷ್ಟು ಸಾಧ್ಯವೋ ಅಷ್ಟು ಹೈಸ್ಕೂಲು ಶಾಲಾ ಕಟ್ಟಡಗಳಿಗೂ ಸಹ ಹಣ ಸಹಾಯ ಒದಗಿಸಿ ಕೊಡುತ್ತೇವೆಂದು ಹೇಳಿದ್ದಾರೆ.

ಇನ್ನೊಂದು ವಿಷಯ. ಈ ಸಭೆಯ ಮಾನ್ಯ ಸದಸ್ಯರೊಬ್ಬರು ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ ಉಪಾಧ್ಯಾಯರುಗಳಿಗೆ ಈಗಿನ ಪೆನ್ಷನ್ ಸ್ಕೀಂ ಅನ್ವಯವಾಗುವಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳಿದ್ದಾರೆ. ಅದು ಮಾತ್ರ ಸಾಧ್ಯವಾಗುವುದಿಲ್ಲ. ಈಗ ಟ್ರಿಬ್ಬಲ್ ಬೆನಿಫಿಟ್ ಸ್ಕೀಂ ವೊಂದನ್ನ ಮಾಡಿದ್ದೇವೆ. ಯಾವ ಹೈಸ್ಕೂಲುಗಳೇ ಆಗಲೀ ಅಥವಾ ಟ್ರೈನಿಂಗ್ ಕಾಲೇಜುಗಳಾಗಲೀ ಖಾಸಗಿಯವರಿಂದ ನಡೆಯುತಿದ್ದರೆ ಅವೆಲ್ಲವೂ ಟ್ರಿಬಲ್ ಬೆನಿಫಿಟ್ ಲಾಭ ಪಡೆಯಬೇಕೇ ವಿನಾ ಅವುಗಳಲ್ಲಿನ ಉಪಾಧ್ಯಾಯರಿಗೆ ಪೆನ್ಷನ್ ಸ್ಕೀಂ ಕೊಡುವುದಕ್ಕಾಗುವುದಿಲ್ಲ.

ಇನ್ನು ಕೊಂಡಜ್ಜಿ ಬಸಪ್ಪನವರ ವರದಿಯ ಆಧಾರದ ಮೇಲೆ ಶಿಕ್ಷಣ ವಿಕೇಂದ್ರೀಕರಣವಾಗುತ್ತದೆ. ಆಗ ಒಂದು ಏಕರೂಪತೆ ಮೇಲೆ ಬದಲಾವಣೆ ಮಾಡಬೇಕಾಗಿ ಬರುತ್ತದೆ. ಅಲ್ಲಿಯವರೆಗೆ ಏನು ಮಾಡುವುದಕ್ಕಾಗುವುದಿಲ್ಲ.

ಇನ್ನು ಶ್ರೀಮಾನ್ ಗೋಪಾಲ ಗೌಡರು ಮಾತನಾಡುತ್ತಾ ಕನ್ನಡ ಬೋಧ ಭಾಷೆಯಾಗಬೇಕು ಎಂಬುದಾಗಿ ಒಂದು ಮಾತನ್ನು ಹೇಳಿದರು. ಹೈಸ್ಕೂಲುಗಳಲ್ಲಿ ಈಗಾಗಲೇ ಆ ರೀತಿ ನಡೆಯುತ್ತಾ ಇವೆ. ಕಾಲೇಜುಗಳಲ್ಲಿ ನಡೆಯುತ್ತಾ ಇಲ್ಲ. ಮೈಸೂರಿನಲ್ಲಿರತಕ್ಕ ಕೆಲವು ಕಾಲೇಜುಗಳಲ್ಲಿ ಪಿ. ಯು. ಸಿ.ಯಲ್ಲಿ ಕನ್ನಡ ಬೋಧ ಭಾಷೆಯನ್ನಾಗಿ ಮಾಡಲು ಎಷ್ಟು ಪ್ರಗತಿಯಾಗಬೇಕೋ ಅಷ್ಟು ಆಗಿಲ್ಲ.

ಶ್ರೀ ಎಸ್. ಶಿವಪ್ಪ.—ಎಲ್ಲಿ ಆಗುತ್ತದೆ? ವೈಸ್ ಚಾನ್ಸಲರಿಗೇ ಕನ್ನಡ ಬರುವುದಿಲ್ಲ.

Sri S. R. KANTHI.—He is an Executive officer. You are the persons who can by down the policy. ಈ ವಿಚಾರವಾಗಿ ಯೂನಿವರ್ಸಿಟಿಯವರು ಹೆಜ್ಜೆ ಇಡಬೇಕಾಗಿದೆ. All India policy ಏನಿದೆಯೋ ಅದೇ ರೀತಿ ಯೂನಿವರ್ಸಿಟಿಯಲ್ಲಿ ಬೋಧ ಭಾಷೆ ಪ್ರಾದೇಶಿಕ ಭಾಷೆಯಾಗಬೇಕೆಂಬ ತತ್ವವನ್ನು ನಾವು ಇಟ್ಟುಕೊಂಡಿದ್ದೇವೆ. ಆದರೆ ಇಂಥಾದನ್ನು ಸ್ವಲ್ಪ ಸ್ವಲ್ಪವಾಗಿ ಯೂನಿವರ್ಸಿಟಿಯವರ ಮಾಡಬೇಕು.

ಇನ್ನು ಕನ್ನಡ ಎನ್‌ಸೈಕ್ಲೋಪಿಡಿಯ ಕೆಲಸ ಬಹಳ ನಿಧಾನವಾಗಿದೆ ಎಂಬುದಾಗಿ ಒಬ್ಬ ಮಾನ್ಯ ಸದಸ್ಯರು ಹೇಳಿದರು. ಆ ಕೆಲಸ ಈಗಾಗಲೇ ತ್ವರಿತವಾಗಿ ನಡೆಯುತ್ತದೆ. ಮೊದಲನೆಯ ವಾಲ್ಯೂಂ ಈ ವರ್ಷ ಹೊರಕ್ಕೆ ಬರುತ್ತದೆ. ಒಟ್ಟು 12 ವಾಲ್ಯೂಮ್ಸ್ ಆಗಬೇಕು. ಆದಷ್ಟು ಜಾಗ್ರತೆಯಾಗಿ ಈ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಏಕೆಂದರೆ ಕನ್ನಡ ನಿಘಂಟಿಗಿಂತ ಇದರ ಕೆಲಸ ಬಹಳ ಕಾಲ ತೆಗೆದುಕೊಳ್ಳುತ್ತದೆ. ಬಹು ದೊಡ್ಡದಾದಂಥ ಕೆಲಸ. ಅದಕ್ಕಾಗಿ ಸ್ವಲ್ಪ ನಿಧಾನವಾಗಿದೆ.

ಇನ್ನು ಕನ್ನಡ ಟೈಪ್‌ರೈಟರ್ ಉಪಯೋಗದ ವಿಚಾರವಾಗಿ ಶ್ರೀಮಾನ್ ಗೋಪಾಲ ಗೌಡರು ಕೇಳಿದ್ದಾರೆ. ನಮಗೆ ನೂರು ಕನ್ನಡ ಟೈಪ್‌ರೈಟರುಗಳು ಬಂದುವು. ಅವನ್ನೆಲ್ಲಾ ಹಂಚಿದ್ದೇವೆ. ಈಗ ಮತ್ತೆ ನೂರಕ್ಕೆ ಆರ್ಡರ್ ಕೊಟ್ಟಿದ್ದೇವೆ. ಡಿಮ್ಯಾಂಡ್ ನೋಡಿಕೊಂಡು ಇವನ್ನು ಹಂಚಲಾಗುತ್ತದೆ. ಇತ್ತೀಚೆಗೆ ಹೈಸ್ಕೂಲುಗಳಿಗೆ ಬೇಕೆಂದು ಬೇಡಿಕೆಗಳು ಬೇರೆ ಬೇರೆ ಭಾಗಗಳಿಂದ ಬರುತ್ತಲಿವೆ; ಹೆಚ್ಚಾಗುತ್ತಲಿವೆ. ಹೆಚ್ಚು ಹೆಚ್ಚಾಗಿ ಹೈಸ್ಕೂಲುಗಳನ್ನು ಎಲ್ಲಾ ಭಾಗಗಳಲ್ಲಿಯೂ ತೆರೆಯಲು ಬೇಕಾದ ಹಣವನ್ನು ಯಥೇಚ್ಛವಾಗಿ ಹಂಚಬೇಕೆಂಬ ಧೋರಣೆ ಸರ್ಕಾರಕ್ಕೇನೋ ಇದೆ. ಈ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಕೇವಲ 200 ಹೈಸ್ಕೂಲುಗಳನ್ನು ಮಾತ್ರ ತೆರೆಯು

ಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದರೂ ಸುಮಾರು 420 ಹೈಸ್ಕೂಲುಗಳನ್ನು ತೆರೆಯಲು ಅನುಮತಿ ಕೊಟ್ಟಿದ್ದೇವೆ. ಆದ್ದರಿಂದ ನಾವು ಈಗ ಜಾಸ್ತಿಯಾಗಿಯೇ ಕೊಟ್ಟಿದ್ದೇವೆ. ಇನ್ನೂ ಈಗಲೂ ಅದರ ಬಗ್ಗೆ ಬೇಡಿಕೆ ಇದ್ದೇ ಇದೆ. ಅದನ್ನು ಪೂರೈಸಬೇಕಾದರೆ ಯೋಜನೆ ಪ್ರಕಾರ 200 ಹೈಸ್ಕೂಲುಗಳನ್ನು ಪ್ರಾರಂಭಿಸ ಬೇಕೆಂಬ ಟಾರ್ಜೆಟ್ ಏನಿದೆಯೋ ಅದರ ಎರಡು ಮೂರರಷ್ಟು ಆಗುತ್ತದೆ ಜಾಸ್ತಿಯಾದರೂ ಚಿಂತೆಯಿಲ್ಲ. ಇನ್ನು ಮೆಡಿಕಲ್ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಸೌಕರ್ಯ ಗಳನ್ನು ಕಲ್ಪಿಸುವುದಕ್ಕೆ ಪ್ರಯತ್ನ ಮಾಡುವುದು ಅತ್ಯಾವಶ್ಯಕವೆಂದು ತಿಳಿದು ಈಗಾಗಲೇ ಸರ್ಕಾರ ದವರು ಆ ಬಗ್ಗೆ ಅನೇಕ ವಿಧವಾಗಿ ಕ್ರಮಗಳನ್ನು ಕೈಕೊಳ್ಳುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ನೀವು ಆರೀತಿ ಸೌಕರ್ಯಗಳನ್ನು ಕೊಡದಿದ್ದರೆ ಸತ್ಯಾಗ್ರಹ ಹೂಡುತ್ತೇವೆ.

ಶ್ರೀ ಎಸ್. ಆರ್. ಕಂಠಿ.—ಅವರು ಸತ್ಯಾಗ್ರಹ ಮಾಡುವುದನ್ನು ನೋಡೋಣ. ಅವರು ಆ ರೀತಿ ಮಾಡುವವರೇ ಅಲ್ಲ. ಅವರೂ ಈಗ ಆ ವಾದ ಬೇಡ.

ಇನ್ನು ಒಂದು ಕೊನೆಯ ಮಾತು. ಶ್ರೀಮಾನ್ ಕೃಷ್ಣ ಅವರು ಬಹಳ ಉತ್ಸಾಹಿಗಳು, ತರುಣರು, ಅವರು ಬ್ಯಾಚುಲರ್ ಎಂಬುದು ನನಗೆ ಗೊತ್ತಾಗಲಿಲ್ಲ. ಆದರೆ ಅವರು ವಿಶಾಲ ಮೈಸೂರು ರಾಜ್ಯದಲ್ಲಿ ಅಸೆಂಬ್ಲಿಯ ಸದಸ್ಯರಾಗಿ ಒಳ್ಳೆಯ ಹೆಸರನ್ನು ಪಡೆದು ಹೆಚ್ಚಿನ ವಿದ್ಯಾವಂತ ರಾಗಿರುವುದರಿಂದ ಶ್ರೀಮಾನ್ ಗೋಪಾಲಗೌಡರು ಉತ್ತರ ಕರ್ಣಾಟಕದ ಹೆಣ್ಣನ್ನು ಮದುವೆ ಯಾಗಿರುವ ಹಾಗೆ ಇವರಿಗೂ ಉತ್ತರ ಕರ್ಣಾಟಕ ದವರನ್ನೇನಾದರೂ ಮದುವೆ ಮಾಡಿದರೆ ಅಗ ಎಲ್ಲ ಸರಿಹೋಗುತ್ತದೆಂದು ನಾನು ದೇವರನ್ನು ಪ್ರಾರ್ಥನೆ ಮಾಡುತ್ತೇನೆ..... ......

Sri C. J. MUCKANNAPPA.—I do not want the Education Minister to become "Nazookaiah".

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಪ್ರತಿವರ್ಷವೂ ಬಡ್ಜೆಟ್ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ರಾಜ್ಯಪಾಲರು ಎರಡು ಸದನಗಳನ್ನೂ ಉದ್ದೇಶಿಸಿ ಭಾಷಣ ಮಾಡುತ್ತಾರೆ. ಅದರಮೇಲೆ ಮಂಡಿಸಿದಂತಹ ವಂದನಾರ್ಪಣ ಪ್ರಸ್ತಾಪದ ಬಗ್ಗೆ ಕೂಡ ವಿಚಾರಗಳನ್ನು ವ್ಯಕ್ತಪಡಿಸುವಂತ ಅವಕಾಶ ಮಾನ್ಯಸದಸ್ಯರಿಗೆ ಸಿಕ್ಕುತ್ತದೆ. ಯಾವಾಗಲೂ ವಿರೋಧಪಕ್ಷದ ಮಾನ್ಯಸದಸ್ಯರು ಯಾವ ರೀತಿಯ ವಿಚಾರಗಳನ್ನ ವ್ಯಕ್ತಮಾಡುತ್ತಾರೆಯೋ ಬಹುಶಃ ಹೆಚ್ಚುಕಡಮೆ ಅದೇ ರೀತಿಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆಂದು ನನಗೆ ಕಾಣಿಸುತ್ತದೆ. ಯಾವುದೂ ಹೊಸವಿಚಾರವನ್ನು ಅವರು ಹೇಳಲಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಕಳೆದ ಒಂದು ವರ್ಷದಲ್ಲಿ ಸರ್ಕಾರದವರು ಸಾಧಿ ಸಿದ್ದು ಏನು, ಮತ್ತು ಮುಂದೆ ಯಾವ ರೀತಿಯ ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆ ಎನ್ನುವ ವಿಚಾರಗಳು ಅದರಲ್ಲಿ ಇರುತ್ತವೆ. ಅದನ್ನು ಕೂಲಂಕಷವಾಗಿ ವಿಚಾರಮಾಡಿ ಅದರಲ್ಲಿ ಸಾಧಿಸಿದಂಥಾದ್ದು ಎಷ್ಟರಮಟ್ಟಿಗೆ ಇದೆ, ಎಷ್ಟರಮಟ್ಟಿಗೆ ಸಾಧಿಸಬೇಕಾಗಿತ್ತು ಎನ್ನುವಂಥಾದ್ದನ್ನು ರಚನಾತ್ಮಕ ದೃಷ್ಟಿಯಿಂದ ವಿಚಾರಮಾಡಿ ಯೋಗ್ಯ ಸಲಹೆಗಳನ್ನು ಕೊಡುವಂಥಾ ಜವಾಬ್ದಾರಿ ವಿರೋಧಪಕ್ಷದ ಮಾನ್ಯಸದಸ್ಯರ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅಂಥವರು ಸಂಪೂರ್ಣವಾಗಿ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಇದ್ದಾರೆ. ವಿರೋಧಪಕ್ಷದ ಒಬ್ಬ ಮಾನ್ಯಸದಸ್ಯರು ಇಲ್ಲಿ ಇದ್ದ ಅವಕಾಶವನ್ನು ಉಪಯೋಗಿಸಿಕೊಂಡು ಒಂದು ಮಾತನ್ನು ಹೇಳಿ ದರು. ಅದನ್ನು ಕೇಳಿ ನನಗೆ ಬಹಳ ನೋವಾಯಿತು. ಆ ಮಾನ್ಯಸದಸ್ಯರ ಹೆಸರನ್ನು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅವರು ಹೇಳಿದರು, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ 1947ನೇ ಇಸವಿಯಿಂದ ಅನೇಕ ಕಾಂಗ್ರೆಸ್ ರಾಜ್ಯಗಳನ್ನು ನಾನು ನೋಡಿದ್ದೇನೆ. ಆದರೆ ಈಗ ಹೊಸದಾಗಿ ಚುನಾವಣೆಯಾಗಿ ನಾವೆಲ್ಲರೂ ಇಲ್ಲಿಗೆ ಬಂದಮೇಲೆ ಇವೊತ್ತಿನ ದಿವಸ ಇಲ್ಲಿ ಇರುವಂಥಾ ಕಾಂಗ್ರೆಸ್ ರಾಜ್ಯವನ್ನು ನಾನು ಎಲ್ಲಿಯೂ ನೋಡಲಿಲ್ಲ ಎಂದು. ಎಂದರೆ ಅವರ ಅರ್ಥದಲ್ಲಿ ಇಂಥಾ ಒಂದು ಕನಿಷ್ಟ ಸರ್ಕಾರವನ್ನು ನಾನು ಎಲ್ಲಿಯೂ ನೋಡಲಿಲ್ಲ ಎನ್ನುವ ಧಾಟಿಯಲ್ಲಿ ಅವರು ಹೇಳಿ ದರು. ಅದನ್ನು ಕೇಳಿ ನನಗೆ ಬಹಳ ನೋವಾಯಿತು. ಆಮೇಲೆ ವಿರೋಧಪಕ್ಷದ ನಾಯಕರು ಹೇಳಿದರು, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಈಗ ಇಲ್ಲಿ ಇರುವಂಥಾ ಸರ್ಕಾರವನ್ನು ನಾನು ಮೊದಲನೆಯ ಸಲ ನೋಡುತ್ತಿದ್ದೇನೆ ಎಂದು. ಜವಾಬ್ದಾರಿಯುತವಾದ ಒಂದು ಸ್ಥಾನದಲ್ಲಿರತಕ್ಕ ಅವರು ಈ ಮಾತನ್ನು ಹೇಳಿದರು. ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಟ್ಟಾರೆ ನಾನು ಹೇಳುವುದು ಪ್ರತಿಯೊಂದು ಸಲ ಏನು ಟೀಕೆಗಳನ್ನು ಮಾಡಿದ್ದಾರೆಯೋ ಬಹುಶಃ ಅದೇ ಟೀಕೆಗಳನ್ನು ಮಾಡಿದ್ದಾರೆ. ಹಿಂದಿನ ಬಡ್ಜೆಟ್ ಅಧಿವೇಶನದ ಅವರ ಭಾಷಣಗಳನ್ನು ತೆಗೆದು

(ಶ್ರೀ ವೀರೇಂದ್ರ ಪಾಟೀಲ್)

ನೋಡಿದರೆ ಅವರು ಆಗ ಮಾಡಿದಂತಹ ಭಾಷಣಕ್ಕೂ ಈ ಭಾಷಣಕ್ಕೂ ಏನೂ ಹೆಚ್ಚುಕಡಮೆ ಆಗುವುದಿಲ್ಲ ಎಂದು ಅನಿಸುತ್ತದೆ. ಈಗ ಒಂದು ವರ್ಷದಿಂದ ನೀವು ಏನೂ ಹೆಚ್ಚು ಸಾಧಿಸಿಲ್ಲ ಎಂದು ಅವರು ಹೇಳಿದರು. ಅದನ್ನು ಹೇಳುವ ಅಧಿಕಾರ ಅವರಿಗೆ ಇದೆ. ಈಗ ಒಂದು ವರ್ಷದಿಂದ ನಾವು ಏನು ಸಾಧಿಸಿದ್ದೇವೆ ಎಂಬುದನ್ನು ನಾನು ಹೇಳುತ್ತೇನೆ. ಪ್ರತಿವರ್ಷವೂ ಹೇಳಿದ್ದೇ ಹೇಳುತ್ತಾರೆ ಎನ್ನುವ ದೋಷಕ್ಕೆ ನಾನು ಒಳಗಾಗದೆ ನಾನು ನನ್ನ ಖಾತೆಗೆ ಸಂಬಂಧಪಟ್ಟ ಕೆಲವು ಮಾತುಗಳನ್ನು ಹೇಳುತ್ತೇನೆ. ಈಗ ಒಂದು ವರ್ಷದಲ್ಲಿ ನಾವು ಯಾವ ಯಾವ ಕಾರ್ಯಗಳನ್ನು ಸಾಧಿಸಿದ್ದೇವೆ ಎನ್ನುವ ವಿಷಯದಲ್ಲಿ ಕೆಲವಾರು ವಿಷಯಗಳನ್ನು ನಾನು ಹೇಳುತ್ತೇನೆ. ಆ ಮೇಲೆ ಬಡ್ಜೆಟ್ಟಿನ ಮೇಲೆ ಚರ್ಚೆಯಾಗುವ ಕಾಲಕ್ಕೆ ಪ್ರತಿಯೊಂದು ಡಿಮ್ಯಾಂಡು ಬಂದಾಗ ಚರ್ಚೆ ಮಾಡುವುದಕ್ಕೆ ಅವಕಾಶವಿರುತ್ತದೆ. ಆಗ ಆ ಬಗ್ಗೆ ಉತ್ತರಕೊಡುವುದಕ್ಕೆ ಅವಕಾಶವಿರುತ್ತದೆ. ಈಗ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಕೃಷ್ಣಾನದಿಯಲ್ಲಿ ನಮಗೆ ಸಾಕಷ್ಟು ನೀರಿನ ಪಾಲು ಸಿಕ್ಕಬೇಕೆಂದು ನಾವು ಅನೇಕ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಈಗ ಒಂದು ವರ್ಷದ ಅವಧಿಯಲ್ಲಿ ಎರಡು ಪ್ರಾಜೆಕ್ಟುಗಳಿಗೆ ಕೇಂದ್ರಸರ್ಕಾರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ತಂದಿದ್ದೇವೆ ಎನ್ನುವ ಮಾತನ್ನು ನಾನು ಬಹಳ ಅಭಿಮಾನದಿಂದ ಹೇಳುತ್ತಿದ್ದೇನೆ. ಘಟಪ್ರಭಾ ಪ್ರಾಜೆಕ್ಟಿನ ವಿಷಯ ತಮಗೆ ಗೊತ್ತಿದೆ. ಅದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುವುದಕ್ಕೋಸ್ಕರ ಕೇಂದ್ರಸರ್ಕಾರದ ಸೆಂಟ್ರಲ್ ವಾಟರ್ ಪವರ್ ಕಮಿಷನ್ನಿಗೆ ನಾವು ಯೋಜನೆ ಕಳುಹಿಸಿ ಎರಡೂವರೆ ವರ್ಷಗಳಾಗಿದ್ದುವು. ಅದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕದೆ ಹಾಗಿಯೇ ಕುಳಿತುಕೊಂಡಿತ್ತು. ಅದರ ಕರೆಸ್‌ಪಾಂಡೆನ್ಸ್ ನಡೆಯುತ್ತಾ ಇತ್ತು. ಅದು ಸ್ಟ್ರೈಟ್‌ಗ್ರಾವಿಟಿ ಡ್ಯಾಂ ಮಾಡಿ ಎಂದು ಒಬ್ಬರು ಹೇಳುತ್ತಿದ್ದರು. ಒಂದು ಸ್ಟ್ರೈಟ್ ಡ್ಯಾಮ್ ಮಾಡಿ ಎಂದು ಒಬ್ಬರು ಹೇಳುತ್ತಿದ್ದಾಗ, ಆ ಡ್ಯಾಮಿನ ಡಿಜೈನ್ ಈ ರೀತಿ ಇರಬೇಕೆಂದು ಒಬ್ಬರು ಹೇಳುತ್ತಿದ್ದರು. ಹೀಗಾಗಿ ಆ ಬಗ್ಗೆ ಈಗ ಎರಡು ವರ್ಷಗಳಿಂದಲೂ ಕರೆಸ್‌ಪಾಂಡೆನ್ಸ್ ನಡೆಯುತ್ತಾ ಇತ್ತು. ಈಗ ಆ ಪ್ರಾಜೆಕ್ಟಿಗೆ ಕ್ಲಿಯರೆನ್ಸ್ ಸಿಕ್ಕಿದೆ. ಆ ಕೆಲಸ ಪ್ರಾರಂಭವಾಗಿದೆ, ಭರದಿಂದ ಆ ಪ್ರಾಜೆಕ್ಟಿನ ಕೆಲಸ ನಡೆಯುತ್ತಿದೆ. ಈ ವರ್ಷ ಸಾಧಿಸಿರುವ ಸಾಧನೆಗಳಲ್ಲಿ ಅದೂ ಒಂದು ಸಾಧನೆ ಎಂದು ನಾನು ಹೇಳುತ್ತೇನೆ.

ಇನ್ನೊಂದು ಅತಿ ಮಹತ್ವದ ಸಾಧನೆಯಾಗಿರುವುದು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ವಿಷಯ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಮಾತನ್ನು ನಾವು ಹೇಳಿರಲಿಲ್ಲ. ನಮ್ಮ ಸಮಾಧಾನದ ಸಲುವಾಗಿ ಅದನ್ನು ಮೂರನೇ ಪಂಚವಾರ್ಷಿಕಯೋಜನೆಯಲ್ಲಿ ಹಾಕಿಕೊಂಡು ಅದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದೆವು. ಕೃಷ್ಣಾ ಮೇಲ್ದಂಡೆಯ ಯೋಜನೆಯ ಅಂಕಿಅಂಶಗಳನ್ನು ಹೇಳುವುದಕ್ಕೆ ಈಗ ನಾನು ತಯಾರಿಲ್ಲ. ಆದರೆ ಅದು 120 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟ್ ಆಗುತ್ತದೆ. 200 ಟಿ.ಎಂ.ಸಿ.ಎಫ್.ಟಿ. ನೀರನ್ನು ಯುಟಿಲೈಜೇಷನ್ ಮಾಡುವಂತಾ ಒಂದು ಪ್ರಾಜೆಕ್ಟ್ ಆಗಿದೆ. ಇದೂ ಒಂದು ಸಾಧನೆಯನ್ನು ನಾವು ಮಾಡಿದ್ದೇವೆ. ಇವೊತ್ತು ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ಆಡಳಿತದಲ್ಲಿ ಲೋಪದೋಷಗಳಿಲ್ಲ ಎಂದು ನಾನು ಹೇಳುತ್ತಾ ಇಲ್ಲ. ಒಂದೆರಡು ಲೋಪದೋಷಗಳು ಇರಬಹುದು. ಈಗ ನಮ್ಮ ದೇಶದಲ್ಲಿ ಏನು ಸಾಧನೆಯಾಗಿದೆ, ಏನು ಸಾಧನೆಯಾಗುತ್ತಿದೆ ಎನ್ನುವ ವಿಚಾರಕ್ಕೆ ಹೋಗೋಣ. 120 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟಿಗೆ ಸೆಂಟ್ರಲ್ ವಾಟರ್ ಪವರ್ ಕಮಿಷನ್ನಿನವರು ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆ ಅದನ್ನು ಇರಿಗೇಷನ್ ಮಿನಿಸ್ಟ್ರಿಯವರು ನಮಗೆ ಕಳುಹಿಸಿಕೊಟ್ಟಿದ್ದಾರೆ. ಇದರ ಪರಿಣಾಮ ಏನು ಎಂಬುದನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಈಗಾಗಲೇ ನಾವು ತೆಗೆದುಕೊಂಡಿರುವ ಪ್ರಾಜೆಕ್ಟುಗಳನ್ನು ಸಂಪೂರ್ಣ ಮಾಡಿಲ್ಲ. ಅವುಗಳನ್ನು ಪೂರ್ತಿಮಾಡುವುದಕ್ಕೆ ನಮಗೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತವೆ. ಹೀಗಿದ್ದರೂ ಕೂಡ ಹೊಸ ಹೊಸ ಪ್ರಾಜೆಕ್ಟುಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆಯೇ ಎಂದು ಕೇಳುವುದು ಸ್ವಾಭಾವಿಕ. ನಾನು ಹಿಂದೆ ಹೇಳಿದ್ದೇನೆ, ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಟೋಟಲ್ 228·69 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿ ಅವುಗಳನ್ನು ಸ್ಟಾರ್ಟ್ ಮಾಡಿದ್ದೇವೆ ಎಂದು. ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ಅವುಗಳಿಗೆ ಈಗಾಗಲೆ 81·11 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಮೂರು ಯೋಜನೆಗಳಲ್ಲಿ ತೆಗೆದುಕೊಂಡ ಕೆಲಸಗಳು ಮುಗಿಯಬೇಕಾದರೆ 147·58 ಕೋಟಿ ರೂಪಾಯಿಗಳು ಬೇಕಾಗುತ್ತವೆ.

2-30 P.M.

ನಾವು ಈಗ ತೆಗೆದುಕೊಂಡಿರುವ ಪ್ರಾಜೆಕ್ಟ್‌ಗಳನ್ನೆಲ್ಲ ಮುಗಿಸಬೇಕಾದರೆ ಇನ್ನೂ 147 ಕೋಟಿ ರೂಪಾಯಿಗಳು ನಮಗೆ ಬೇಕು. ಅನೇಕ ಮಾನ್ಯ ಸದಸ್ಯರು ಕೃಷ್ಣ ನೀರಿನಲ್ಲಿ ಸರಿಯಾದ ಪಾಲನ್ನು ಪಡೆಯುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ಎಂದು ಕೇಳಿದರು. ನಮಗೆ 600 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ 1974ರ ವರೆಗೂ ಅವಕಾಶವನ್ನು ಕೊಟ್ಟಿದ್ದಾರೆ. ಅವರಲ್ಲಿಗೆ ಹೋದಾಗ ಆ ನೀರನ್ನು ಉಪಯೋಗಿಸುವ ಶಕ್ತಿ ಇದೆಯೋ ಇಲ್ಲವೋ, ಅದಕ್ಕೆ ಬೇಕಾದ ಸೌಲಭ್ಯ ಗಳು ಇವೆಯೋ ಇಲ್ಲವೋ ಎಂದು ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಆದ್ದರಿಂದ ನಾವು ಕೃಷ್ಣ ನೀರನ್ನು ಕೇಳುವಾಗ ಅದರ ಇನ್ನೊಂದು ಮುಖವನ್ನೂ ಕೂಡ ನೋಡಬೇಕಾಗುತ್ತದೆ. ಈ ಸಭೆ ಯಲ್ಲಿ ಮತ್ತು ಮೇಲ್ಮನೆಯಲ್ಲಿ ಕೂಡ ನಾನು ಹೇಳಿದ್ದೇನೆ, ಹೆಚ್ಚು ನೀರನ್ನು ಬೇಕು ಎಂದು ಕೇಳು ತ್ತಿದ್ದೀರೇ ಹೊರತು ನೀರು ಸಿಕ್ಕಿದಲ್ಲಿ ಅದನ್ನು ಉಪಯೋಗ ಮಾಡಬೇಕಾಗಿದ್ದರೆ ದುಡ್ಡು ಎಲ್ಲಿಂದ ತರಬೇಕು ಎನ್ನುವುದಕ್ಕೆ ಯಾವ ತರಹ ರಚನಾತ್ಮಕವಾದ ಸಲಹೆಯನ್ನೂ ಇದುವರೆಗೆ ಯಾರೂ ಮಾಡಿಲ್ಲ ಎಂದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಪಾನ ನಿರೋಧವನ್ನು ರದ್ದು ಮಾಡಿ, ರಸ್ತೆ ಸಾರಿಗೆ, ಸೇಲ್ಸ್‌ಟ್ಯಾಕ್ಸ್ ಮುಂತಾದುವುಗಳಲ್ಲಿ ಸೋರಿ ಹೋಗುತ್ತಿರುವುದನ್ನು ತಡೆಗಟ್ಟಿ ಎಂದು ಹೇಳುತ್ತಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಪಂಚವಾರ್ಷಿಕ ಯೋಜನೆಯ ಸ್ಪಿಲ್ ಓವರ್ ಕೆಲಸಗಳನ್ನು ಇಟ್ಟುಕೊಂಡರೂ, ಸುಮಾರು 120 ಕೋಟಿ ರೂಪಾಯಿ ವೆಚ್ಚದ ಅಪ್ಪರ್ ಕೃಷ್ಣ ಯೋಜನೆಗೆ ಕ್ಲಿಯರೆನ್ಸ್ ತಂದಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಪ್ರಾಜೆಕ್ಟನ್ನು ಎಲ್ಲಿ ಕಟ್ಟಬೇಕು, ಅಲಮಟ್ಟಿಯಲ್ಲಿಯೇ ಅಥವಾ ನಾರಾಯಣಪುರದಲ್ಲಿಯೇ ಎನ್ನುವ ವಿಚಾರದಲ್ಲಿ ತಮ್ಮಲ್ಲಿಯೇ ಒಳಜಗಳಗಳಿವೆಯಲ್ಲ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವಷ್ಟರಲ್ಲಿಯೇ ಮಾನ್ಯ ಸದಸ್ಯರು ಆತುರ ಪಡುತ್ತಾರೆ. ನಮ್ಮಲ್ಲಿ ದುರ್ದೈವದಿಂದ ಏನಾಗಿದೆ ಎಂದರೆ ನಾವೆಲ್ಲ ಪ್ರಾರಂಭಶೂರರು ; ಮತ್ತು ಚರ್ಚೆ ಮಾಡುವುದರಲ್ಲಿ, ವಿವಾದವನ್ನು ಹುಟ್ಟಿಸುವುದರಲ್ಲಿ ಶೌರ್ಯತ್ವವನ್ನು, ಶಕ್ತಿಯನ್ನೂ ತೋರಿಸು ತ್ತಿದ್ದೇವೆಯೇ ಹೊರತು ನಮಗೆ ದೊರೆಯುವ ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳ ಬೇಕು, ಏನೋ ಪ್ರಯತ್ನಗಳನ್ನು ಮಾಡಿಕೊಂಡು ಕ್ಲಿಯರೆನ್ಸ್ ಪಡೆದ ಮೇಲೆ ಯಾವ ರೀತಿ ಅದರ ಸದುಪಯೋಗ ಮಾಡಿಕೊಳ್ಳಬೇಕು ಎನ್ನುವುದನ್ನು ನೋಡುತ್ತ ಇಲ್ಲ.

ಶ್ರೀ ಎಸ್. ಗೋಪಾಲ ಗೌಡ.—ನಾವು ರಚನಾತ್ಮಕ ಸಲಹೆಗಳನ್ನು ಕೊಟ್ಟಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಸರ್ಕಾರದಲ್ಲಿ ಇದ್ದು ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡು ವವರು, ರಾಜ್ಯಕ್ಕೆ ಬರುವ ನೀರಿನ ಪಾಲನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗದೆ ಹೋದರೆ ಅದಕ್ಕೆ ಪ್ರತಿಯಾಗಿ ನಮ್ಮ ಮೇಲೆ ಅಪಾದನೆಯನ್ನು ಮಾಡುವುದರಿಂದ ರಾಜ್ಯಕ್ಕೆ ನೀರು ಬರುತ್ತದೆ ಎಂದು ನಾನು ತಿಳಿದುಕೊಳ್ಳುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನದಿ ನೀರಿನಲ್ಲಿ ಪಾಲನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗು ತ್ತದೆಯೇ ಇಲ್ಲವೇ ಎನ್ನುವ ಪ್ರಶ್ನೆಯ ಮೇಲೆ ಹೋಗುತ್ತ ಇಲ್ಲ. ನಾನು ಹೇಳಿದ್ದು ಇವತ್ತು ಯಾವ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಿದ್ದೇವೆಯೋ ಅವಷ್ಟನ್ನೂ 1974ರ ಒಳಗಾಗಿ ಪೂರ್ತಿ ಯಾಗಿ ಬುಕ್‌ಮಾಡಿ ಉಪಯೋಗ ಮಾಡಿಕೊಳ್ಳಲು ಶಕ್ತಿ ಇದೆಯೇ, ಹೆಚ್ಚು ನೀರು ಬೇಕು ಎನ್ನು ವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು, ಆ ಕ್ರಮಗಳನ್ನು ತೆಗೆದುಕೊಳ್ಳಲು ಎಷ್ಟು ಗಾತ್ರದ ಸಮಸ್ಯೆ ನಮ್ಮ ಮುಂದೆ ಇದೆ ಎಂದು ಹೇಳುತ್ತಿದ್ದೇನೆ. ನಮಗೆ ಬರಬೇಕಾದ ನೀರನ್ನು ಪಡೆಯಲು ಯಾವ ರೀತಿಯ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದು ತಮಗೆಲ್ಲ ಗೊತ್ತಿದೆ. ನದಿ ನೀರಿನ ಹಂಚಿಕೆಯ ಬಗ್ಗೆ ಕೇಂದ್ರ ಸರ್ಕಾರ ಮಾಡಿರುವುದಕ್ಕೆ ನಮ್ಮ ಒಪ್ಪಿಗೆ ಇಲ್ಲ ಎನ್ನುವ ಮಾತನ್ನು ರಾಜ್ಯಪಾಲರು ಸಹ ಹೇಳಿದ್ದಾರೆ.

ನಾನು ಹೇಳುತ್ತಿರುವ ವಿಚಾರಗಳು ಇಲ್ಲಿರುವ ಮಾನ್ಯ ಸದಸ್ಯರಿಗೆ ಮಾತ್ರ ಗೊತ್ತಾಗಬೇಕು ಎಂದಲ್ಲ. ಇಡೀ ರಾಜ್ಯದಲ್ಲಿ ಪರಿಸ್ಥಿತಿ ಏನಿದೆ, ಸರ್ಕಾರ ಇದನ್ನು ಯಾವ ರೀತಿ ಎದುರಿಸುತ್ತಿದೆ, ಸರ್ಕಾರದ ಯೋಜನೆಗಳೇನಿವೆ, ಈ ವಿಷಯಗಳೆಲ್ಲ ಜನತೆಗೂ ಗೊತ್ತಾಗಬೇಕು. ಇಲ್ಲಿರುವವರು ಪ್ರತ್ಯಕ್ಷವಾಗಿ ತಿಳಿದುಕೊಳ್ಳುತ್ತಾರೆ. ಹೊರಗಿರುವ ಜನರು ಪತ್ರಿಕೆಗಳ ಮೂಲಕ ತಿಳಿಯುವ ಅವಕಾಶವಿದೆ. ಅದಕ್ಕಾಗಿ ಹೇಳುತ್ತಿದ್ದೇನೆ.

(ಶ್ರೀ ವೀರೇಂದ್ರ ಪಾಟೀಲ್)

ಕೃಷ್ಣ ಮೇಲ್ದಂಡೆ ಯೋಜನೆಗೆ ಕ್ಲಿಯರೆನ್ಸ್ ಬಂದ ಮೇಲೆ ಆಲಮಟ್ಟಿಯಲ್ಲಿ ಕಟ್ಟಬೇಕೇ, ನಾರಾಯಣಪುರದಲ್ಲಿ ಕಟ್ಟಬೇಕೇ ಎನ್ನುವುದರ ಬಗ್ಗೆ ವಿವಾದವನ್ನು ಹುಟ್ಟಿಸುವುದರಲ್ಲಿ ನಾವು ನಮ್ಮ ಕಾಲವನ್ನು ಖರ್ಚು ಮಾಡುವುದಕ್ಕೆ ತಯಾರಾಗಿದ್ದೇವೆಯೋ ಹೊರತು, ಕೆಲಸ ಮಾಡೋಣ ದುಡ್ಡು ಖರ್ಚು ಮಾಡೋಣ, ಆದಷ್ಟು ತೀವ್ರ ಕೆಲಸ ಮಾಗಿಸಿ ನೀರನ್ನು ಉಪಯೋಗ ಮಾಡೋಣ ಎನ್ನುವುದರ ಕಡೆ ಏನು ರಚನಾತ್ಮಕ ದೃಷ್ಟಿ ಇರಬೇಕೋ ಅದು ಕಾಣುತ್ತ ಇಲ್ಲ. ಕೆಲವು ಕಡೆ explcitation (ಶೋಷಣೆ) ಕಾಣಿಸುತ್ತಿದೆ. ಕೆಲವರು ಬಿಜಾಪುರಕ್ಕೆ ಹೋಗಿ ಅಲಮಟ್ಟಿಯಲ್ಲಿ ಅಣೆಕಟ್ಟನ್ನು ಕಟ್ಟುವುದಿಲ್ಲ, ಬಿಜಾಪುರಕ್ಕೆ ನೀರು ದೊರೆಯುವುದಿಲ್ಲ, ನೀವೆಲ್ಲ ಸೇರಿ ಒಂದು ಸಮ್ಮೇಳನವನ್ನು ಮಾಡಿ ನಾವೂ ತಜ್ಞರನ್ನು ಕರೆದುಕೊಂಡು ಬರುತ್ತೇವೆಂದು ಹೇಳುತ್ತಾರೆ. ಅದೇ ರೀತಿ ಕೆಲವರು ಗುಲ್ಬರ್ಗಾಕ್ಕೆ ಹೋಗಿ ನಾರಾಯಣಪುರದಲ್ಲಿ ಅಣೆಕಟ್ಟನ್ನು ಕಟ್ಟುವುದಿಲ್ಲ, ಆಲಮಟ್ಟಿಯಲ್ಲಿ ಕಟ್ಟುತ್ತಾರೆ, ಇದರಿಂದ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ನೀರು ಸಿಕ್ಕುವುದಿಲ್ಲ, ನೀವೆಲ್ಲ ಏಕೆ ಸುಮ್ಮನೆ ಕುಳಿತಿದ್ದೀರಿ, ನೀವೂ ಗದ್ದಲವನ್ನು ಎಬ್ಬಿಸಿ, ನಾವು ಭಾಷಣ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ರೀತಿ ಇವತ್ತು ನಾರಾಯಣಪುರದಲ್ಲಿ ಕಟ್ಟಬೇಕೇ ಅಥವಾ ಆಲಮಟ್ಟಿಯಲ್ಲಿ ಕಟ್ಟಬೇಕೇ ಎನ್ನುವ ವಿಚಾರದಲ್ಲಿ ಆಗಲೆ ಚರ್ಚೆ ಪ್ರಾರಂಭವಾಗಿದೆ. ಈಗಾಗಲೇ ಸರ್ಕಾರದ ಧೋರಣೆ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಎರಡು ಕಡೆಯೂ ಅಣೆಕಟ್ಟನ್ನು ಕಟ್ಟುತ್ತೇವೆ ಏಕಕಾಲಕ್ಕೆ ಅಡಿಗಲ್ಲನ್ನು ಹಾಕುತ್ತೇವೆ, ಎರಡು ಕಡೆಯೂ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೇನೆ. ಇನ್ನೂ ಒಮ್ಮೆ ಇವತ್ತಿನ ದಿವಸವೂ ಹೇಳುತ್ತಿದ್ದೇನೆ.

ಶ್ರೀ ಜಿ. ಎನ್. ಪಾಟೀಲ್ (ತಾಳಿಕೋಟೆ).—ನಾರಾಯಣಪುರ ಮತ್ತು ಆಲಮಟ್ಟಿಯಲ್ಲಿ ಎರಡು ಕಡೆಯೂ ಅಣೆಕಟ್ಟನ್ನು ಕಟ್ಟುವುದಾಗಿ ಹೇಳಿದಿರಿ. ಆದರೆ main dam ಎಲ್ಲಿ ಆಗುತ್ತದೆ ಎಂಬುದನ್ನು ಸ್ವಲ್ಪ ವಿವರಿಸಿ ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ನಿಮಗೆ ಹೇಳಬೇಕಾದರೆ main dam subsidiary dam ಎನ್ನುವಂಥ ಪ್ರಶ್ನೆಯೇ ಇಲ್ಲ. ಇವತ್ತು ನಾವು ಹೆಚ್ಚು ನೀರು ಉಪಯೋಗ ಮಾಡುವುದಕ್ಕೆ ಏನೇನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆಯೋ ಅದನ್ನೆಲ್ಲ ತೆಗೆದುಕೊಳ್ಳುತ್ತೇವೆ. ಯಾವ ಅಣೆಕಟ್ಟನ್ನು ಯಾವ ಹಂತದಲ್ಲಿ ಮೊದಲು ನಿಲ್ಲಿಸುತ್ತೇವೆ, ಯಾವ ಹಂತದಲ್ಲಿ ತೆಗೆದುಕೊಳ್ಳುತ್ತೇವೆ ಎನ್ನುವ ವಿವರಗಳೆಲ್ಲ ಇಂಜನಿಯರುಗಳಿಗೆ ಮತ್ತು ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್ನಿಗೆ ಬಿಟ್ಟದ್ದು. ಅದರಲ್ಲಿ ಡಾಕ್ಟರ್ ರಾವ್ ಅವರೂ ಸಹ ಇದ್ದಾರೆ. ಮಾನ್ಯ ಸದಸ್ಯರ ಸಂಶಯ ನಿವಾರಣೆಯಾಗಬೇಕು ಎನ್ನುವುದರ ಸಲುವಾಗಿ ಒಂದು ವಿಷಯವನ್ನು ಹೇಳುತ್ತೇನೆ. ಕೇಂದ್ರ ನೀರಾವರಿ ಮಂತ್ರಿಗಳು ಇದೇ ಮಾರ್ಚ್ ತಿಂಗಳು 14 ಮತ್ತು 15 ನೇ ತಾರೀಖು ಆ ಭಾಗದಲ್ಲಿ ಪ್ರವಾಸ ಮಾಡಿಕೊಂಡು ಹೋಗುತ್ತಾರೆ. ಅವರು ಅಲಮಟ್ಟಿ ಮತ್ತು ನಾರಾಯಣಪುರ ಎರಡು ಸ್ಥಳಗಳನ್ನೂ ನೋಡಿಕೊಂಡು ಹೋಗುತ್ತಾರೆ. ಆದಷ್ಟು ಬೇಗ ಹೆಚ್ಚು ನೀರನ್ನು ಉಪಯೋಗ ಮಾಡಿಕೊಳ್ಳಬೇಕು, ಆದಷ್ಟು ತೀವ್ರ ಪ್ರತಿಫಲ ಬರಬೇಕು, ನಮ್ಮ ಭೂಮಿಗೆ ನೀರು ಬರಬೇಕು, ನೀರನ್ನು ಉಪಯೋಗ ಮಾಡಿಕೊಳ್ಳಲು ಯಾವುದು ಆರ್ಥಿಕವಾಗಿ ಹೆಚ್ಚು ಲಾಭ ಕೊಡುತ್ತದೆ, ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಅಂಥ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕು ಎನ್ನುವ ವಿಚಾರವನ್ನು ಮಾಡುತ್ತಿದ್ದೇವೆ.

ಬಿಜಾಪುರಕ್ಕೆ ಅನ್ಯಾಯಮಾಡಬೇಕೆಂದು ಸರ್ಕಾರ ಕನಸು ಮನಸಿನಲ್ಲಿಯೂ ಯೋಚಿಸಿಲ್ಲ ಹಾಗೆ ಎಂದು ಮಾನ್ಯಸದಸ್ಯರಿಗೆ ಹೇಳಬಯಸುತ್ತೇನೆ. ಬಿಜಾಪುರದಲ್ಲಿ ಅವರು ಯಾವ ರೀತಿ ದೇಶ ಪ್ರೇಮದಿಂದ ಹಣ, ಚಿನ್ನ ಮುಂತಾದುವನ್ನು ಕೊಟ್ಟರೋ ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ವಿಶೇಷವಾಗಿ ಭೂಮಿ ಮುಳುಗಡೆಯಾಗುವುದೂ ಎಲ್ಲ ಬಿಜಾಪುರದ ಭೂಮಿಯೇ.

ಶ್ರೀ ಎಸ್. ಶಿವಪ್ಪ.—ಬಿಜಾಪುರದಿಂದ ಮೂರು ಜನ ಮಂತ್ರಿಗಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಬಿಜಾಪುರದಲ್ಲಿ ಆಲಮಟ್ಟಿಯ ಹತ್ತಿರ ಇವತ್ತು ಅಣೆಕಟ್ಟೆಯನ್ನು ಹಾಕಿದರೂ ಸಿಂದಿಗಿ, ಇಂಡಿ ತಾಲ್ಲೂಕುಗಳಲ್ಲಿ ಲಿಫ್ಟ್ ಇರಿಗೇಷನ್‌ನಿಂದ 2–3 ಲಕ್ಷ ಎಕರೆ ಭೂಮಿ ನೀರಾವರಿಗೆ ಬರಬೇಕಾಗಿದೆ. ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿ ಅಲ್ಲಿಯ ರೈತರಿಗೆ ಲಿಫ್ಟ್ ಇರಿಗೇಷನ್ನಿನಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಒದಗುವಂತೆ ವ್ಯವಸ್ಥೆ ಮಾಡುವ ಯೋಚನೆ ಸರ್ಕಾರಕ್ಕಿದೆ. ಆದುದರಿಂದ ತಮ್ಮ ಹಿತವನ್ನು ಬಿಟ್ಟುಬಿಡಬೇಕಾದ ವಿಚಾರ ಯಾವುದೂ ಇದರಲ್ಲಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಅಲಮಟ್ಟಿಯಲ್ಲಿ ಕಟ್ಟುತ್ತಾರೆ ಅಥವಾ ನಾರಾಯಣಪುರದಲ್ಲಿ ಕಟ್ಟುತ್ತಾರೆ ಎಂದು ಏನು ವಿವಾದವನ್ನು ಎಬ್ಬಿಸಿದ್ದಾರೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಸರ್ಕಾರದ ಮೇಲೆ ವಿಶ್ವಾಸವಿಡಿ. ದೇಶಕ್ಕೆ ಯೋಗ್ಯವಾಗುವಂಥ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇದೇ ರೀತಿ ಹಾರಂಗಿ ಯೋಜನೆಯೂ ಒಂದು ಸಮಸ್ಯೆಯಾಗಿದೆ. ಇದರ ಬಗ್ಗೆ ಅಲ್ಲಲ್ಲಿ ಸಮ್ಮೇಳನಗಳಾಗುತ್ತಿವೆ. ಹಿಂದಿನ ಸರಕಾರ ಮಾಡಿದುದೆಲ್ಲವನ್ನೂ ಈಗ ತಿರುಗು ಮುರುಗು ಮಾಡಿ ಏನೋ ಮತ್ತೊಂದನ್ನು ಈ ಸರಕಾರದವರು ಮಾಡುತ್ತಿದ್ದಾರೆ, ಯಾರದೋ 1,200 ಎಕರೆ ಕಾಫಿ ತೋಟವನ್ನುಳಿಸಲು ಅನುಕೂಲ ಮಾಡುವುದಕ್ಕಾಗಿ ಕೋಟ್ಯಂತರ ರೂಪಾಯಿ ಹಾಳು ಮಾಡುತ್ತಿದ್ದಾರೆಂದು ಪ್ರಚಾರ ಮಾಡುತ್ತಿದ್ದಾರೆ. ಹೀಗೆ ವಿವಾದಗಳಲ್ಲಿ ಶಕ್ತಿಯನ್ನು ವಿನಿಯೋಗ ಮಾಡುವುದಕ್ಕೆ ಬದಲು ನದಿಯ ನೀರನ್ನು ಆದಷ್ಟುಮಟ್ಟಿಗೂ ಉಪಯೋಗ ಮಾಡಿಕೊಳ್ಳೋಣ ಎಂಬ ಮನೋಭಾವ ಜನರಿಗಿದ್ದರೆ ಎಷ್ಟೋ ಒಳ್ಳೆಯದು. ಹಾರಂಗಿ ಕಾವೇರಿ ಬೇಸಿನ್‌ನಲ್ಲಿದೆ. ಆದುದರಿಂದ ಕಳವಳ ಮತ್ತು ಆತುರವಿರಬಹುದು. ಅದು ನಮಗೂ ಗೊತ್ತಿದೆ. ಹಾರಂಗಿಯ ಬಗ್ಗೆ ಹಿಂದಿನ ಸರಕಾರ ತೆಗೆದುಕೊಂಡ ನಿರ್ಣಯದಲ್ಲಿ ಸ್ವಲ್ಪವೂ ನಾವು ಬದಲಾವಣೆ ಮಾಡಿಲ್ಲ; ಮಾಡುವುದಿಲ್ಲ. ನಿಜಲಿಂಗಪ್ಪನವರ ಸರಕಾರ ಬರುವುದಕ್ಕೆ ಮುಂಚೆ ಏನು ಯೋಜನೆ ಮಾಡಿತ್ತೋ ಅದರಲ್ಲಿ ಲೇಶವೂ ಬದಲಾವಣೆ ಮಾಡಿಲ್ಲ. ಈಗ ಹೊಸದಾಗಿ ಬದಲಾವಣೆ ಮಾಡಿ ಯೋಜನೆ ಮಾಡಿದ್ದಾರೆ, ಅದರ ಪ್ರಕಾರ ಹೆಚ್ಚು ಹಣ ಖರ್ಚಾಗುತ್ತದೆ, ನೀರಾವರಿ ಕಡಮೆಯಾಗುತ್ತದೆ, ಕೇವಲ ಸಾವಿರಾರು ಎಕರೆ ಕಾಫಿ ತೋಟಕ್ಕಾಗಿ ಕೋಟ್ಯಾಂತರ ರೂಪಾಯಿ ಹೆಚ್ಚು ಖರ್ಚು ಮಾಡುವುದಕ್ಕೆ ಸಿದ್ಧವಾಗಿದ್ದಾರೆ, ಲಕ್ಷಾಂತರ ಎಕರೆಗೆ ನೀರು ಕೊಡುವುದನ್ನು ಕೈಬಿಟ್ಟಿದ್ದಾರೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಇದು ನಿಜವಲ್ಲ. ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮೋಡಿಫೈಡ್ ಹಾರಂಗಿ ಯೋಜನೆಯನ್ನು ವಿಚಾರ ಮಾಡಿ ಅದರ ವರದಿಯನ್ನು ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಷನ್‌ಗೆ ಕಳುಹಿಸಿದ್ದೇವೆ. ಕೂಡಲೆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು 15 ಲಕ್ಷ ರೂಪಾಯಿ ಮಂಜೂರು ಮಾಡಿದ್ದೇವೆ. ರಿವೈಸ್ಡ್ ಪ್ಲಾನ್ ಪ್ರಕಾರ ಮೊದಲಿನ ಅಂದಾಜಿಗಿಂತ ಕಡಮೆ ಖರ್ಚಾಗುತ್ತದೆ. ಆದರೂ ಹೆಚ್ಚು ನೀರಾವರಿಯಾಗುತ್ತದೆ. ಇದು ಮುಖ್ಯ ಪ್ರಶ್ನೆಯಾಗಿದೆ.

Sri G. A. THIMMAPPA GOWDA (Arkalgud).—How is it more economical than the original one ?

Mr. SPEAKER.—If we get into details, we will never reach the end of it. These demands, about which questions are being put, not at one place, but at four different places, have been discussed for hours together.

ಶ್ರೀ ವೀರೇಂದ್ರ ಪಾಟೀಲ್.—ನಾನು ಇದರ ಸಲುವಾಗಿ ಹೇಳಿದೆ. ಮೊದಲಿನ ಪ್ರಪೋಸಲಿಗಿಂತ ಮಿತವ್ಯಯದಲ್ಲಿ ಆಗುತ್ತದೆ. ಆ ವಿವರಗಳು ಈಗ ನನ್ನಲ್ಲಿಲ್ಲ. ಸೆಂಟ್ರಲ್ ವಾಟರ್ ಅಂಡ್ ಪವರ್ ಕಮಿಷನ್‌ಗೆ ಎಲ್ಲ ಕಾಗದಪತ್ರಗಳೂ ಹೋಗಿವೆ. ಪೂರ್ವ ಸಿದ್ಧತೆಗಳ ಖರ್ಚಿಗಾಗಿ 15 ಲಕ್ಷ ರೂಪಾಯಿ ಮಂಜೂರು ಮಾಡುತ್ತೇವೆ. ಅಷ್ಟೇ ಭೂಮಿ ನೀರಾವರಿಯಾಗುತ್ತದೆ ಆದರೆ ಕಡಮೆ ಖರ್ಚಾಗುತ್ತದೆ. ಎಂದಮೇಲೆ ಯಾರೋ ಕಾಫಿ ತೋಟದವರಿಗೆ ಉಪಕಾರ ಮಾಡುವುದು ಮತ್ತು ಸಾವಿರಾರು ಎಕರೆ ಭೂಮಿಗೆ ನೀರು ಸಿಕ್ಕದೇಯಿರುವ ಹಾಗೆ ಮಾಡುವ ಪ್ರಶ್ನೆಯೇ ಇಲ್ಲ. ಕೂಲಂಕಷವಾಗಿ ವಿಚಾರ ಮಾಡಿ ಸರಕಾರ ಈ ನಿರ್ಣಯಕ್ಕೆ ಬಂದಿದೆ ಎಂದು ಹೇಳುತ್ತಿದ್ದೇನೆ. ಇಷ್ಟು ಹೇಳಿದಮೇಲೆ ಈ ವಿಷಯದಲ್ಲಿ ಅಷ್ಟು ಚರ್ಚೆ ಅಥವಾ ವಿವಾದವಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ.

Sri S. SIVAPPA.—How is the cost cheaper than that of the original proposal ? It is a controversial project..........

Mr. SPEAKER.—I have already said that clarifications will be sought only at the end, if permitted.

ಶ್ರೀ ವೀರೇಂದ್ರ ಪಾಟೀಲ್.—ಈಗ ನಮ್ಮ ಎಲ್ಲ ಪ್ರಯತ್ನಗಳನ್ನೂ ವಿನಿಯೋಗ ಮಾಡಿ ಕಾವೇರಿ ನೀರಿನ ಉಪಯೋಗ ಮಾಡಿಕೊಳ್ಳಬೇಕಾಗಿದೆ. 1924ರ ಒಪ್ಪಂದದ ಪ್ರಕಾರ ಉಪಯೋಗ ಮಾಡಿಕೊಳ್ಳುವುದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡಬೇಕಾಗಿದೆ. ಕಾವೇರಿ ಬೇಸಿನ್ ಒಪ್ಪಂದದಲ್ಲಿ ಎಷ್ಟೋ ನದಿಗಳು ಬರುತ್ತವೆ. ಆ ನದಿಗಳಿಗೆ ಕಟ್ಟೆ ಹಾಕುವುದಕ್ಕೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಹೇಮಾವತಿ, ಲಕ್ಷ್ಮಣ ತೀರ್ಥ, ಕಪಿನಿ, ಹೊನ್ನು ಹೊಳೆ, ಸುವರ್ಣಾವತಿ, ಎಗಜಿ-ಬೇಲೂರು ಸೇತುವೆಯವರೆಗೆ ಕಪಿನಿಯ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಸುವರ್ಣಾವತಿಯನ್ನು ಪ್ರಾರಂಭ ಮಾಡಿಲ್ಲ. ಮಾಡುವುದಕ್ಕಾಗಿ ಪ್ಲಾನ್ ಮತ್ತು ಅಂದಾಜನ್ನು ತರಿಸಿದ್ದೇವೆ. ಇದೂ ಕೂಡ ಷೆಡ್ಯೂಲ್ಡ್ ನದಿಯಾಗಿರುವುದರಿಂದ ಇದನ್ನೂ ಮಾಡುವುವಕ್ಕೆ ಸಿದ್ಧವಾಗಿದ್ದೇವೆ. ಇನ್ನೂ ಅಂತಿಮ ಮಂಜೂರಾತಿ ಕೊಟ್ಟಿಲ್ಲ. ಆದರೂ ಜಾಗ್ರತೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಎಗಜಿ

(ಶ್ರೀ ವೀರೇಂದ್ರ ಪಾಟೀಲ್)

ನದಿ ಬೇಲೂರು ಸೇತುವೆಯವರೆ ಷೆಡ್ಯೂಲ್ಡ್ ಗೆನದಿಯಾಗುತ್ತದೆ. ಎಗಜಿಯನ್ನು ಡೈವರ್ಟ್ ಮಾಡಿ ವಾಣಿವಿಲಾಸ ಸಾಗರಕ್ಕೆ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಒಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರು ಈ ಕೆಲಸವನ್ನು ನೋಡಿಕೊಳ್ಳಬೇಕೆಂದು ಇದಕ್ಕೆ ಬೇಕಾದ ಸಬ್‌ಡಿವಿಜನ್ ಮಂಜೂರು ಮಾಡಿದ್ದೇವೆ, ಕೆಲಸ ಭರದಿಂದ ಸಾಗುತ್ತಿದೆ. ಅದೆಷ್ಟು ಬೇಗ ತೆಗೆದು ಕೊಳ್ಳಲು ಸಾಧ್ಯವಾಗುತ್ತದೆ. ಕಂಬದಕಡದ ವಿಚಾರದಲ್ಲಿ ಇನ್‌ವೆಸ್ಟಿಗೇಷನ್ ನಡೆದಿದೆ. ಅದರ ಬಗ್ಗೆ ವರದಿ ಬಂದಮೇಲೆ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನಾವು ಸಾಧಿಸಿರುವ ವಿಷಯಗಳ ಬಗ್ಗೆ ಹೇಳುತ್ತಿದ್ದೇನೆ.

ಮೈನರ್ ನೀರಾವರಿಯ ವಿಚಾರ ಬಂತು. ಮೈನರ್ ನೀರಾವರಿಯಲ್ಲಿ ಬಹುಶಃ ಹಿಂದೂಸ್ಥಾನದ ಬೇರೆ ಯಾವ ರಾಜ್ಯದಲ್ಲಿಯೂ ನಮ್ಮಲ್ಲಿ ಸಾದಿಸಿರುವಷ್ಟು ಸಾಧಿಸಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಇದನ್ನು ಪ್ಲಾನಿಂಗ್ ಕಮಿಷನ್ ಅವರೂ ಒಪ್ಪಿಕೊಂಡಿದ್ದಾರೆ. ಹೋದ ಸಾರಿ, ತುರ್ತು ಪರಿಸ್ಥಿತಿಯಾದಮೇಲೆ ಸುಮಾರು ಮೂರು ಕೋಟಿ ರೂಪಾಯಿ ಹೆಚ್ಚಿನ ಹಣಸಹಾಯ ಕೊಟ್ಟಿದ್ದೇವೆ. ಮೊನ್ನೆ 250 ಲಕ್ಷ ರೂಪಾಯಿ ಆ್ಯಕ್ಸಿಲರೇಟೆಡ್ ಅಸಿಸ್ಟೆನ್ಸ್ ಸಂಬಂಧವಾಗಿ, ಪ್ಲಾನಿಂಗ್ ಕಮಿಷನ್ನಿನ ಸದಸ್ಯರು ಇಲ್ಲಿ ಬಂದಿದ್ದಾಗ ಚೆನ್ನಾಗಿ ಕೆಲಸ ಮಾಡಿದ್ದೀರಿ, ಸಾಕಷ್ಟು ಹಣಸಹಾಯ ಬರಬಹುದೆಂದೂ, ಇದಕ್ಕೆ ಇನ್ನೂ ಒಂದು ಕೋಟಿ ರೂಪಾಯಿ ಕೊಡುವುದಕ್ಕೆ ಶಿಫಾರಸು ಮಾಡಲಾಗಿದೆಯೆಂದೂ ಹೇಳಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನೀವು ಸಾಕಷ್ಟು ಭರದಿಂದ ಕೆಲಸ ಮಾಡುತ್ತಿಲ್ಲವೆಂದು ಅವರಿಂದ ಆಕ್ಷೇಪಣೆ ಬಂದಿದೆಯೆಂದು ಪತ್ರಿಕೆಗಳಲ್ಲಿ ಬಂದಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮೇಜರ್ ನೀರಾವರಿಗಳ ಕೆಳಗೆ ಪೊಟೆನ್‌ಷಿಯಲ್ ಇದ್ದರೂ ಪ್ರಾಜೆಕ್ಟ್ ಪ್ರದೇಶದಲ್ಲಿ ಅಭಿವೃದ್ಧಿ ಸಾಕಷ್ಟು ಆಗಿಲ್ಲವೆಂದು ಹೇಳಿದ್ದಾರೆ, ಅದನ್ನು ನಾವೂ ಒಪ್ಪಿಕೊಂಡಿದ್ದೇವೆ. ಇದು ಹೀಗಾಗಿರುವುದು ನಮ್ಮಲ್ಲಿ ಮಾತ್ರವಲ್ಲ. ಎಲ್ಲ ಮೇಜರ್ ಮತ್ತು ಮೀಡಿಯಮ್ ಪ್ರಾಜೆಕ್ಟುಗಳಲ್ಲಿಯೂ ಬರುತ್ತದೆ. ಮೈನರ್‌ನಲ್ಲಿ ಬರುವುದಿಲ್ಲ. ಮೈನರ್ ನೀರಾವರಿಗಳಲ್ಲಿ ರೈತರು ತಾವೇ ಮಾಡಿಕೊಳ್ಳುತ್ತಾರೆ. ಒಂದು ಉದಾಹರಣೆಯನ್ನು ನೀರಾವರಿಯ ಬಗ್ಗೆ ಹೇಳುವುದಾದರೆ, ಐದು ವರ್ಷಗಳಲ್ಲಿ ಎಂಟೂವರೆ ಕೋಟಿ ರೂಪಾಯಿ ಖರ್ಚು ಮಾಡುವ ಯೋಜನೆಯಿದೆ. ಪಬ್ಲಿಕ್ ವರ್ಕ್ಸ್ ಸೆಕ್ಟರಿನಲ್ಲಿ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು, ಹೊಸದಾಗಿ ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು, ಪಂಪ್‌ಸೆಟ್‌ಗಳನ್ನು ಒದಗಿಸುವುದು ಇವೆಲ್ಲ ಮೈನರ್ ನೀರಾವರಿ. ಇದರ ಬಗ್ಗೆ ಈಗ ಅಂಕಿಅಂಶಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪಿ. ಡಬ್ಲ್ಯೂ. ಡಿ. ಇಲಾಖೆಗೆ ಐದು ವರ್ಷಗಳಿಗಾಗಿ ಕೊಟ್ಟಿರತಕ್ಕಂಥ ಹಣವನ್ನು ಮೂರು ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ. ಕೆಲಸ ಕಾರ್ಯಗಳು ನಡೆದಿವೆ. ಇದು ಫಿಜಿಕಲ್ ಅಚೀವ್‌ಮೆಂಟ್ ಅಲ್ಲವೇ? ಈಗ ಇರತಕ್ಕಂಥ ಅಚ್ಚುಕಟ್ಟು ಅಲ್ಲದೆ 18,266 ಎಕರೆ ಹೆಚ್ಚು ಭೂಮಿಗೆ ನೀರು ಕೊಟ್ಟಿದ್ದೇವೆ. 47,678 ಎಕರೆ ಜಮೀನು ಅಚ್ಚುಕಟ್ಟಿನಲ್ಲಿ ತಂದಿದ್ದೇವೆ. ಈ ದಿಶೆಯಲ್ಲಿ ಬಹಳ ರಭಸದಿಂದ ಕೆಲಸ ನಡೆಯುತ್ತಿದೆ. ವಿರೋಧ ಪಕ್ಷದ ಅನೇಕ ಸದಸ್ಯರೂ ಒಂದು ಮಾತನ್ನು ಹೇಳಿದ್ದಾರೆ. ಮೊದಲು ಕೆಲಸ ನಡೆಯುತ್ತಿದ್ದಿಲ್ಲ. ಈಗ ಕೆಲಸವಾಗುತ್ತಾ ಇದೆ ಎಂದು ಹೇಳಿದ್ದಾರೆ. ಕೆಲಸ ಚುರುಕಾಗಿ ನಡೆಯಲು ಜನರಲ್ಲಿ ಒಂದು ಟೆಂಪೋ ಕ್ರಿಯೇಟ್ ಮಾಡಿದ್ದೇವೆ. ಟ್ಯಾಂಕ್ ರೆಸ್ಟೋರೇಷನ್‌ಗಾಗಿ ಸುಮಾರು 4 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. 1961-62ರಲ್ಲಿ 261 ಲಕ್ಷ, 1962-63ರಲ್ಲಿ 251 ಲಕ್ಷ, 1963-64ರಲ್ಲಿ 400 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಬೇಕು. ಇದು ನಾವು ಸಾಧಿಸಿದ ಸಾಧನೆಯಲ್ಲವೇ? ಬೀದರ್ ಜಿಲ್ಲೆಯಲ್ಲಿಯೂ ಕೆಲಸ ತೆಗೆದುಕೊಂಡಿದ್ದೇವೆ. ಹೋದ ವರ್ಷದ ಬಜೆಟ್ ಮತ್ತು ಈ ವರ್ಷದ ಸಪ್ಲಿಮೆಂಟರಿ ಬಜೆಟ್‌ಗಳನ್ನು ನೋಡಬೇಕು.

ಬೆಂಗಳೂರು ಸಿಟಿ ವಾಟರ್ ಸಪ್ಲೈ ಸ್ಕೀಂನಲ್ಲಿ ಟ್ರಿಪ್ಲಿಕೇಟ್ ಮೇನ್ಸ್ ಹಾಕಿ ಪ್ರತಿ ದಿನ 23 ಮಿಲಿಯನ್ ಗ್ಯಾಲನ್ ನೀರು ಸಪ್ಲೈ ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಪೂರೈಸಲು ಪ್ರಯತ್ನ ನಡೆದಿದೆ. ಬೆಂಗಳೂರು ಸಿಟಿ ವಾಟರ್ ಸಪ್ಲೈ ಸ್ಕೀಂ ಪ್ಲಾನಿನಲ್ಲಿಲ್ಲ. ಇನ್‌ವೆಸ್ಟಿಗೇಷನ್ನಿಗೆ 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಮೊದಲು ಇದಕ್ಕಾಗಿ ಏನೂ ಇರಲಿಲ್ಲ. 26 ಕೋಟಿ ರೂಪಾಯಿ ವೆಚ್ಚವಾಗುವ ಬೆಂಗಳೂರು ಸಿಟಿ ವಾಟರ್ ಸಪ್ಲೈ ಸ್ಕೀಂ ಮಾಡಿದ್ದೇವೆ. ಈ ಇಂಟಿಗ್ರೇಟೆಡ್ ಸ್ಕೀಂನಿಂದ 66 ಮಿಲಿಯನ್ ಗ್ಯಾಲನ್ ನೀರು ಒದಗಿಸುವುದಲ್ಲದೆ ಇಂಟರ್‌ನಲ್ ಡಿಸ್ಟ್ರಿಬ್ಯೂಷನ್ ಮಾಡಿಕೊಂಡು ನೀರು ಹೋಗುವುದಕ್ಕೆ ಸೀವೇಜ್ ಡಿಸ್ಪೋಜಲ್ ಮಾಡಬೇಕಾಗಿದೆ. ರಾತ್ರಿ ಹಗಲು ದುಡಿದು ನಮ್ಮ ಎಂಜಿನಿಯರುಗಳು ಈ ಯೋಜನೆಯನ್ನು ತಯಾರಾಮ್ಮ

ಡಿದ್ದಾರೆ. ಈ ಸ್ಕೀಂ ರಿಪೋರ್ಟ್ ಸಹ ತಯಾರು ಮಾಡಿದ್ದಾರೆ. ಕೇಂದ್ರ ಸರಕಾರದ ಒಪ್ಪಿಗೆ ಪಡೆದುಕೊಂಡು ವರ್ಲ್ಡ್ ಬ್ಯಾಂಕಿನಿಂದ ಸಾಲ ಪಡೆಯಲು ವಿಚಾರ ಮಾಡಿದ್ದೇವೆ. ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಔಟ್ ಸೈಡ್ ದಿ ಪ್ಲಾನ್ 26 ಕೋಟಿ ರೂಪಾಯಿ ಪಡೆಯುವ ಪ್ರಯತ್ನ ಯಶಸ್ವಿಯಾಗುವ ಪರಿಸ್ಥಿತಿಗೆ ಬಂದಿರುವುದು ಇದೊಂದು ದೊಡ್ಡ ಅಚೀವ್‌ಮೆಂಟ್ ಆಗಿರುವುದಿಲ್ಲವೇ ಎಂಬುದನ್ನು ತಾವೇ ವಿಚಾರ ಮಾಡಬೇಕು. ಈಗಾಗಲೇ ವರ್ಲ್ಡ್ ಬ್ಯಾಂಕ್ ಟೀಮಿನವರು ಇಲ್ಲಿಗೆ ಬಂದು ನೋಡಿಕೊಂಡು ಹೋಗಿದ್ದಾರೆ; ಇದಲ್ಲದೆ ಮತ್ತೆ ಬರುತ್ತಾರೆ. ಈ ಪ್ರಾಜೆಕ್ಟ್ ರಿಪೋರ್ಟ್ ನೋಡಿ ಅವರು ಬಹಳ ಪ್ರಶಂಸೆ ಮಾಡಿದ್ದಾರೆ. ಈ ಯೋಜನೆಯನ್ನು ಬಹಳ ಬುದ್ಧಿವಂತಿಕೆಯಿಂದ ತಯಾರು ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಮಾನ್ಯ ಸದಸ್ಯರು ದಯವಿಟ್ಟು ಈ ಅಂಶವನ್ನು ವಿಚಾರ ಮಾಡಿ ನೋಡಬೇಕು. ನಮ್ಮ ಎಂಜಿನಿಯರುಗಳು ಹಗಲು ರಾತ್ರಿ ದುಡಿದು ಪರಿಶ್ರಮ ಪಟ್ಟುದಕ್ಕೆ ಅವರ ಬೆನ್ನು ಚಪ್ಪರಿಸಬೇಕೋ ಬೇಡವೋ ನೀವೇ ವಿಚಾರ ಮಾಡಿ. ಮಂತ್ರಿಗಳ ಬೆನ್ನು ಚಪ್ಪರಿಸುವುದು ನಮಗೆ ಬೇಡ. ಆದರೆ ಇದಕ್ಕಾಗಿ ದುಡಿದಿರುವ ಎಂಜಿನಿಯರುಗಳ ಬೆನ್ನು ಚಪ್ಪರಿಸಬೇಕಾದುದು ಸರಿಯಾದುದು ಎಂದು ಹೇಳುತ್ತೇನೆ. ಏಕೆಂದರೆ ಈ ವಿಷಯವು ಎಷ್ಟೋ ಜನರಿಗೆ ತಿಳಿದಿರಲಿಕ್ಕಿಲ್ಲ. ನಮ್ಮ ದೇಶದಲ್ಲಿ ಸರ್ ಸಿ. ವಿ. ರಾಮನ್‌ರವರಂಥ ದೊಡ್ಡ ಸೈಂಟಿಸ್ಟ್ ಇದ್ದಾರೆ. ರವೀಂದ್ರನಾಥ ಟಾಗೋರರಂಥ ಕವಿ ಇದ್ದಾರೆಂಬ ಮಾತು ಅವರಿಗೆ ನೋಬಲ್ ಪ್ರೈಜ್ ಕೊಡುವವರೆಗೆ ಎಷ್ಟೋ ಜನರಿಗೆ ನಮ್ಮ ದೇಶದಲ್ಲಿ ತಿಳಿದು ಬಂದಿರಲಿಕ್ಕಿಲ್ಲ. ಆದುದರಿಂದ ಇಂಥ ಮಹಾ ಕಾರ್ಯ ಸಾಧನೆಯಲ್ಲಿ ದುಡಿಯುವ ನಮ್ಮ ಅಧಿಕಾರಿಗಳನ್ನು ಪ್ರೀತಿ ವಿಶ್ವಾಸಗಳಿಂದ ಪ್ರಶಂಸೆ ಮಾಡಿ ಅವರ ಬೆನ್ನು ಚಪ್ಪರಿಸುವುದು ನಮ್ಮ ಕರ್ತವ್ಯ. ಹಾಗೆ ಮಾಡಲು ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮಗೆಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ.

